ವಿತ್ತೀಯ ಕಾರ್ಯಕಲಾಪಗಳು

1996-97ನೇ ಸಾಲಿನ ಅಂದಾಜುಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

+ಶ್ರೀ ಸಿದ್ದರಾಮಯ್ಯ (ಮಾನ್ಯ ಹಣಕಾಸಿನ ಸಚಿವರು) : ಮಾನ್ಯ ಅಧ್ಯಕ್ಷರೇ 1996-97ನೇ ಸಾಲಿನ ಪೂರಕ ಅಂದಾಜುಗಳು (ಎರಡನೇಯ ಕಂತು) ಈಗಾಗಲೇ ಸಭೆಯ ಮುಂದೆ ಇಟ್ಟಿದ್ದೇನೆ. ಇದರಲ್ಲಿ ಪೂರಕ ಅಂದಾಜು 218 ಕೋಟಿ 64 ಲಕ್ಷ ರೂಪಾಯಿಗಳು.

6.20 ಪಿ.ಎಂ.

128 ಕೋಟಿ ರೂಪಾಯಿ ಅಡ್ಜಸ್ಟ್ ಆಗತಕ್ಕಂಥಾದ್ದು, ಅದರಲ್ಲಿ 21 ಕೋಟಿ 29 ಲಕ್ಷ ಸೆಂಟ್ರಲ್ ಗೌರ್ನಮೆಂಟನಿಂದ ಬರತಕ್ಕಂಥಾದ್ದು ಅದು ಕೂಡ ಅಡ್ಜಸ್ಟಮೆಂಟ್ ಆಗತಕ್ಕಂಥಾದ್ದು. ಹೊಸ ವರ್ಷಕ್ಕೆ ಮಾತ್ರ ಬಜೆಟ್‌ನಲ್ಲಿ ಸಾಕಾಗದೇ ಇರತಕ್ಕಂಥ ಕೆಲವು ಬಾಬುಗಳಿಗೆ ಹಣ ಕೊಟ್ಟಿದ್ದೇವೆ. ಒಂದು, 13 ಕೋಟಿ ನ್ಯಾಷನಲ್ ಗೇಮ್ಸಗೆ ಕೊಟ್ಟಿರತಕ್ಕಂಥಾದ್ದು, ಮತ್ತೆ 8 ಕೋಟಿ ಮಹದೇವ ಟೆಕ್ಸ್‌ಟೈಲ್ ಗೆ ಕೊಟ್ಟಿರುವುದು, ಕಬ್ಬು ಬೆಳೆಗಾರರಿಗೆ 3 ಕೋಟಿ ರೂಪಾಯಿಗಳು ಕೊಟ್ಟಿರುವುದು, ರೈತರ ಸಾಲ ಮನ್ನಾ ಮಾಡಿರುವುದಕ್ಕೆ 10 ಕೋಟಿ ರೂಪಾಯಿ ಬಜೆಟನಲ್ಲಿ ಇರಲಿಲ್ಲ, ಅದನ್ನೂ ಕೊಟ್ಟಿದ್ದೇವೆ. ಹೀಗೆ ಇದು ಮೇಜರ್ ಐಟಮ್ಸ್ ಆಗಿವೆ. ಇನ್ನು ಕೆಲರು ಸಣ್ಣ ಪುಟ್ಟವು ಇವೆ. 69 ಕೋಟಿ 7 ಲಕ್ಷ ರೂಪಾಯಿ ಮಾತ್ರ ಕ್ಯಾಶ್ ಔಟ್ ಫ್ಲೋ, ಉಳಿದಿದ್ದು 128 ಕೋಟಿ ರೂಪಾಯಿ ಮತ್ತು 21 ಕೋಟಿ ರೂಪಾಯಿ ಅಡ್ಜಸ್ಟಮೆಂಟದು. ಆದ್ದರಿಂದ, ಮಾನ್ಯ ಸದಸ್ಯರು ಈ ಪೂರಕ ಅಂದಾಜಿಗೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ಶ್ರೀ ವೈ. ರಾಮಕೃಷ್ಣ : ಮಾನ್ಯ ಉಪಾಧ್ಯಕ್ಷರೆ, ಈ ಹಣಕಾಸಿನ ಅಪ್ರೋಪ್ರಿಯೇಷನ್ ಬಿಲನ್ನು ಕಾನ್ಸಿಟ್ಯೂಷನ್ ಆರ್ಟಿಕಲ್ 205ರ ಪ್ರಕಾರ ಈ ಸದನದ ಮುಂದೆ ತಂದಿದ್ದಾರೆ. ಈ ಆರ್ಟಿಕಲ ಯಾವ ಮಟ್ಟಕ್ಕೆ ದುರುಪಯೋಗವಾಗಿದೆ ಎನ್ನುವುದಕ್ಕೆ ಐಟಂ ನಂಬರ್ 57, ಪೇಜ ನಂಬರ 30 ರೊಳಗೆ ಕಾಣುತ್ತದೆ. ಇದರಲ್ಲಿ ನಮಗೆ ಇರತಕ್ಕಂಥ ಅಧಿಕಾರ ಏನು? ಒಂದೇ ಬೇಡಿಕೆಗೆ ನಾವು ವೋಟು ಕೊಟ್ಟ ಮೇಲೆ ಆ ಬೇಡಿಕೆಯಲ್ಲಿರತಕ್ಕಂಥ ಹಣವನ್ನು ಖರ್ಚು ಮಾಡಬೇಕು. ಖರ್ಚಾಗಲಿಲ್ಲವೆಂದರೆ ಅದನ್ನು ಕಂಟಿನಜೆನ್ಸಿ ಫಂಡನಲ್ಲಿ ಇಡಬೇಕು. ಇವರು 57ನೇ ಡಿಮ್ಯಾಂಡನಲ್ಲಿ ಏನು ಮಾಡಿದ್ದಾರೆ? ಬಹುಶಃ ವಿಧಾನ ಸಭೆಯ ಇತಿಹಾಸದಲ್ಲಿ ಆಗದೇ ಇರತಕ್ಕಂಥ ಕೆಲಸವನ್ನು ಇವರು ಮಾಡಿದ್ದಾರೆ. ಈ ರೀತಿ ಮಾಡಲು ಸರ್ಕಾರಕ್ಕೆ ಅಧಿಕಾರ ಕೊಟ್ಟವರು ಯಾರು? It has been decided by the government to withdraw the Special Component Plan to the extent of Rs. 118.68 crores. 118 ಕೋಟಿ 68 ಲಕ್ಷ ರೂಪಾಯಿಗಳು 35 ಇಲಾಖೆಗಳ ಅಭಿವೃದ್ಧಿಗೆ ಸಂಬಂಧ ಪಟ್ಟದ್ದುದು. ಇಷ್ಟು ಹಣವನ್ನು ವಿತಡ್ರಾ ಮಾಡುವುದಕ್ಕೆ ಇವರಿಗೆ ಅಧಿಕಾರ ಕೊಟ್ಟವರು ಯಾರು? ಆರ್ಟಿಕಲ್ 205 ಏನು ಹೇಳುತ್ತದೆ?

"If the amount authorised by any law made in accordance with the provisions of article 204 to be expended for a particular service for the current

financial year is found to be insufficient for the purposes of that year or when a need has arisen during the current financial year for supplmentary or additional expenditure upon some new service not contemplated in the annual financial statement for that year..."

ಸ್ಪೆಷಲ್ ಕಾಂಪೊನೆಂಟ್ ಪ್ಲಾನನಲ್ಲಿ ಬಂದಂಥ ಎಲ್ಲಾ ಹಣವನ್ನು ವಿತಡ್ರಾ ಮಾಡುವುದಕ್ಕೆ ಇವರಿಗೆ ಅಧಿಕಾರ ಕೊಟ್ಟವರು ಯಾರು? ಈ ಹಣ ಸ್ಟೇಟ್ ಗೌರ್ನಮೆಂಟನದೇ? ಅಥವಾ ಸೆಂಟ್ರಲ್ ಗೌರ್ನೆಂಟನದೋ ಸೇರಿದೆಯೋ? ಒಂದೇ ವೇಳೆ ಸೇರಿದ್ದರೆ, ಪ್ಲಾನಿಂಗ್ ಕಮಿಷನದು ಒಪ್ಪಿಗೆ ತೆಗೆದುಕೊಂಡಿದ್ದೀರೋ? ಸೆಂಟ್ರಲ್ ಗೌರ್ನೆಂಟ್ ಅಪ್ರೂವಲ್ ತೆಗೆದುಕೊಂಡಿದ್ದೀರೋ? ಸ್ಟೇಟ್ ಫೈನಾನಫಿಯಲ್ ಕಮಿಷನನಿಂದ ಅಪ್ರೂವಲ್ ತೆಗದುಕೊಂಡಿದ್ದಿರೋ? ಇದು ಫಂಡಮೆಂಟಲ್ ಇಶ್ಯೂ, ಇದರಲ್ಲಿ ನೀವು ನು ಬೇಕಾದರು ಮಾಡಬಹುದೆಂದಲ್ಲ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ, it should be withdrawn. ಇಲ್ಲದಿದ್ದರೆ, ಈ ಮನೆಯ ಸದಸ್ಯರ ಹಕ್ಕಿಗೆ ಧಕ್ಕೆ ಬರುತ್ತದೆ. ಒಂದಲ್ಲ, ಎರಡಲ್ಲ, 35 ಡಿಪಾರ್ಟಮೆಂಟಿನಿಂದದ 118 ಕೋಟಿ 68 ಲಕ್ಷ ರೂಪಾಯಿಗಳನ್ನು ಸರ್ಕಾರ ವಿತಡ್ರಾ ಮಾಡಬಹುದಾ? ಹೊಸ ಹೆಡನ್ನು ಕ್ರಿಯೇಟ ಮಾಡಬಹುದೇ? ಹಾಗಾದರೇ ನಮ್ಮಿಂದ ಏಕೆ ವೋಟು ತೆಗೆದುಕೊಳ್ಳಲಾಯಿತು? ಒಪ್ಪಿಗೆ ಕೊಟ್ಟಿರುವ ಹಣದಲ್ಲಿ ಸ್ವಲ್ಪ ಮಟ್ಟಿಗೆ ಎಕ್ಸಸ ಮಾಡಿಕೊಳ್ಳಬಹುದು ಅಥವಾ ಕಡಿಮೆ ಮಾಡಿಕೊಳ್ಳಬಹುದು. ಅದಕ್ಕೆ ತಮಗೆ ಅಧಿಕಾರ ಇದೆ. ಇರುವ ಹಣವನ್ನೆಲ್ಲಾ ವಿತಡ್ರಾ ಮಾಡಿಕೊಳ್ಳುವುದಕ್ಕೆ ಅವರಿಗೆ ಏನು ಅಧಿಕಾರ ಇದೆ. My question is whether you have got powers to withdraw all the amount under 35 heads? 118 ಕೋಟಿ 68 ಲಕ್ಷ ರೂಪಾಯಿಗಳನ್ನು ವಾಪಸ್ಸ ತೆಗೆದುಕೊಂಡು ಮನೆಗಳನ್ನು ಕಟ್ಟುವುದಕ್ಕೆ ಕೊಟ್ಟಿದ್ದಾರೆ. ಇದು ಕಾನ್ಸ್ಟಿಟ್ಯೂಷನಗೆ ಸಂಬಂಧಪಟ್ಟ ಪ್ರಶ್ನೆ ಆಗಿರುವುದರಿಂದ ಮಾನ್ಯ ಮಂತ್ರಿಯವರು ಇದಕ್ಕೆ ಉತ್ತರ ಕೊಡಬೇಕಾಗುತ್ತದೆ. ಪಾಯಿಂಟ್ ಆಫ್ ಆರ್ಡರ್ ಮೂಲಕ ಇದನ್ನು ನಾನು ರೈಸ್ ಮಾಡಿದ್ದೇನೆ. ಹೌಸಿಂಗಗೆ ಕೊಡುವುದಕ್ಕೆ ಬೇರೆ ದುಡ್ಡು ಇಲ್ಲವೇ? ಅದಕ್ಕೆ ಬೇರೆ ಹೆಡ ಇದೆಯಲ್ಲ? ಅದರಲ್ಲಿರುವ ದುಡ್ಡನ್ನು ನೀವು ಕೊಡಬೇಕೆ? ಸ್ಪೆಷಲ್ ಕಾಂಪೋನೆಂಟನಲ್ಲಿರತಕ್ಕಂಥ ಹಣವನ್ನೆಲ್ಲಾ ತೆಗೆದುಕೊಂಡು ಮನೆಗಳನ್ನು ಕಟ್ಟುವುದಕ್ಕೆ ಕೊಡುವುದು ಏಕೆ? who permitted you to do it? ಯಾವುದಾದರೂ ರಾಜ್ಯದಲ್ಲಿ ಇಂಥಾ ಕೆಲಸ ನಡೆದಿದೆಯೋ? ಹೌಸಿಂಗ್ ದುಡ್ಡನಲ್ಲಿ ಹೌಸಿಂಗಗೆ ಕೊಡಿ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಉಪಾಧ್ಯಕ್ಷರೆ, ಎಸ್.ಸಿ.ಪಿ. ಹಣವನ್ನೆಲ್ಲಾ ವಿತಡ್ರಾ ಮಾಡಿಕೊಳ್ಳಲಾಗಿದೆಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ವಿತಡ್ರಾ ಮಾಡಿಕೊಂಡಿರುವುದು ನಿಜ ಸ್ವಾಮಿ. ನಾನೂ ಸಮಾಜ ಕಲ್ಯಾಣ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಕಳೆದ 50 ವರ್ಷಗಳಿಂದ ಬಡವರುಗಳಿಗೆ ದನ, ಕುರಿ, ಕೋಳಿ ಮತ್ತು ಹಂದಿಗಳನ್ನು ಕೊಡುತ್ತಿದ್ದರೂ ಆ ಜನಾಂಗದ ಅಭಿವೃದ್ಧಿಯಾಗಲೇ ಇಲ್ಲ. ಶೆಡ್ಯೂಲ್ಡ ಕ್ಯಾಸ್ಟ್‌ನ 19 ಲಕ್ಷ ಫ್ಯಾಮಿಲಿಗಳನ್ನು 17 ಲಕ್ಷ ಫ್ಯಾಮಿಲಿನಗಳು ಬಡತನ ರೇಖೆಯಿಂದ ಮೇಲೆ ಬಂದಿದ್ದಾರೆಂದು ಹೇಳುತ್ತಾರೆ. ನಿಜ ಸ್ಥಿತಿ ಮಾನ್ಯ ಸದಸ್ಯರಿಗೂ ಗೊತ್ತಿದೆ. ಅದಕ್ಕಾಗಿ, ಈ ಎಲ್ಲಾ ಹಣವನ್ನು ಒಟ್ಟಿಗೆ ಕ್ರೋಢೀಕರಿಸಿ, ಈ ಸಮಾಜದ ಏಳಿಗೆಗಾಗಿ ಮೂರು

ಕಾರ್ಯಕ್ರಮಗಳನ್ನು ಹಾಕಿಕೊಂಡು, ಅವುಗಳೆಂದರೆ, ಮನೆ ಕಟ್ಟಿಸಿಕೊಡುವುದು ಎಜುಕೇಷನ್ ಕೊಡುವುದು ಮತ್ತು ನೀರಾವರಿ ಸೌಲಭ್ಯ ಕಲ್ಪಿಸಿಕೊಡುವುದು ಈ ಕೆಲಸಕ್ಕಾಗಿ ಈ ಒಟ್ಟು ಹಣವನ್ನು ಖರ್ಚು ಮಾಡಬೇಕೆಂದು ಸರ್ಕಾರದ ಮಟ್ಟದಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ. ಈ ಜನಾಂಗವನ್ನು ಆರ್ಥಿಕವಾಗಿ ಪ್ರಬಲಗೊಳಿಸಬೇಕು ಎನ್ನುವ ಒಂದೇ ಉದ್ದೇಶದಿಂದ ಎಸ್.ಸಿ.ಪಿ. ಹಣವನ್ನೆಲ್ಲ ಒಟ್ಟಿಗೆ ಕ್ರೋಢೀಕರಿಸಲಾಗಿದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

SRI Y. RAMAKRISHNA : Apart from merits, I am raising a constitutiona issue. Whether your decision is constitutional? ಇವತ್ತು ತಮಿಳುನಾಡಿಗೆ ಒಂದು ಎಸ್.ಸಿ.ಪಿ. ಆಂಧ್ರ ಪ್ರದೇಶಕ್ಕೆ ಒಂದು ಎಸ್.ಸಿ.ಪಿ, ಕರ್ನಾಟಕಕ್ಕೆ ಒಂದು ಎಸ್.ಸಿ.ಪಿ. , ಯು.ಪಿಗೆ ಒಂದು ಇರುತ್ತದೆಯೇ? ಎಸ್.ಸಿ.ಪಿ. ಹಣವನ್ನು ಯಾವ ರೀತಿ ಖರ್ಚು ಮಾಡಬೇಕೆಂದು ಗೌರ್ನಮೆಂಟ್ ಆಫ್ ಇಂಡಿಯಾ ಪ್ಯಾಟ್ರನ್ ಇಲ್ಲವೇ? ಡಿಪಾರ್ಟಮೆಂಟಿಗೆ ಹಂಚಿರುವುದನ್ನು ಬದಲಾವಣೆ ಮಾಡುವುದಕ್ಕೆ ಅವರ ಕ್ಯಾಬಿನೆಟಗೆ ಅಧಿಕಾರ ಇದೆಯೋ ಎಂದು ನಾನು ಪ್ರಶ್ನೆ ಕೇಳುತ್ತೇನೆ. ಒಂದು ಮೇಳೆ ಅಧಿಕಾರ ಇದ್ದರೆ,ಅದು ಆರ್ಟಕಲ್ 205ರ ಪ್ರಕಾರ ಆಗಬೇಕು. ಅಲ್ಟ್ರೇಷನ್ ಆಗಬೇಕು, ಅಥವಾ ಅಡಿಷನ್ ಗ್ರ್ಯಾಂಟ್ ಇರಬೇಕು ಅಥವಾ ಸಪ್ಲಿಮೆಂಟ್ ಗ್ರ್ಯಾಂಟ್ ಇರಬೇಕು. ಅದು ಬಿಟ್ಟು ವಿತಡ್ರಾ ಮಾಡಿಕೊಳ್ಳುವುದಕ್ಕೆ ಅವರಿಗೆ ಅಧಿಕಾರ ಎಲ್ಲಿದೆ? ಅವರು ಹಾಕಿರುವ ವರ್ಡ ನೋಡಿ, ``it has been decided by the government to withdraw the SCP and tribal plan to the extent of Rs. 118.68 crores".

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಉಪಾಧ್ಯಕ್ಷರೆ, 1996-67ನೇ ವಿಶೇಷ ಘಟಕ ಯೋಜನೆಯಡಿಯಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳಿಂದ ಹಣ ಕ್ರೋಢೀಕರಿಸುವ ಬಗ್ಗೆ ಹಾಗೂ ಮರು ಹಂಚಿಕೆ ಮಾಡಿರುವ ಬಗ್ಗೆ ವಿವರಗಳನ್ನು ಕೊಡಲಾಗಿದೆ. ಕೃಷಿ ಇಲಾಖೆಯಿಂದ 300 ಲಕ್ಷ, ತೋಟಗಾರಿಕೆ ಇಲಾಖೆಯಿಂದ 3 ಲಕ್ಷ, ಭೂ ಸಾರ ಸಂರಕ್ಷಣೆ ಇಲಾಖೆಯಿಂದ 367 ಲಕ್ಷ, ಮೈದಾನ ಅಭಿವೃದ್ಧಿ ಮಂಡಳಿಯಿಂದ 173 ಲಕ್ಷ, ಪಶು ಸಂಗೋಪನೆ ಇಲಾಖೆಯಿಂದ 100 ಲಕ್ಷ, ಕರ್ನಾಟಕ ಹಾಲು ಉತ್ಪಾದಕರ ಸಂಘದಿಂದ 65 ಲಕ್ಷ, ಮೀನುಗಾರಿಕೆ ಇಲಾಖೆಯಿಂದ 50 ಲಕ್ಷ, ಅರಣ್ಯ ಇಲಾಖೆಯಿಂದ 376 ಲಕ್ಷ, ಸಹಕಾರ ಇಲಾಖೆಯಿಂದ 200 ಲಕ್ಷ, ಮಲೆನಾಡು ಅಭಿವೃದ್ಧಿ ಮಂಡಳಿಯಿಂದ 720 ಲಕ್ಷ, ಹೀಗೆ ಒಟ್ಟು 101.6 ಕೋಟಿ ರೂಪಾಯಿಗಳನ್ನು ಅಲ್ಲಿಂದ ತೆಗೆಯಲಾಗಿದೆ. ಆ ಹಣವನ್ನು ತೆಗೆಯುವುದಾಗಿದ್ದರೆ ಮೊದಲು ಆ ಹೆಡನಲ್ಲಿ ಏಕೆ ಇಡಲಾಯಿತು? ಕುರಿ, ಕೋಳಿಗೆ ಕೊಟ್ಟಿರುವುದು ಅನುಪಯುಕ್ತವಾಯಿತೆನ್ನುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಕುರಿ, ಕೋಳಿ ಕೊಡವುದಕ್ಕೇ 101.6 ಕೋಟಿ ರೂಪಾಯಿಗಳನ್ನು ಇಡಲಾಗಿತ್ತಾ? ಇಲಾಖೆಗಳಿಂದ ಕ್ರೋಢೀಕರಿಸಿದ ಹಣವನ್ನು ಎಲ್ಲಿಗೆ ಕೊಡಲಾಗಿದೆ? ಕೊಳಚೆ ನಿರ್ಮೂಲನ ಮಾಡುವುದಕ್ಕೆ ಇಲ್ಲಿಂದ ಹಣವನ್ನು ವಾಪಸ್ ಪಡೆಯಬೇಕಾಗಿತ್ತೇ ಸ್ವಾಮಿ? ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಬಗ್ಗೆ ಹೆಚ್ಚಿನ ಗಮನಹರಿಸಲಿ ಎನ್ನುವ ಉದ್ದೇಶದಿಂದ ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಇವರು ವಾಪಸ್

ತೆಗದುಕೊಂಡಿರುವ ಹಣವನ್ನು ಕೊಳಚೆ ನಿರ್ಮೂಲನೆ ಮಾಡುವುದಕ್ಕೆ ಮತ್ತು ಬಡವರಿಗೆ ಮನೆಗಳನ್ನು ಕಟ್ಟುವುದಕ್ಕೆ ಕೊಟ್ಟು ಕಲ್ಯಾಣ ಮಾಡುತ್ತೇವೆಂದು ಹೇಳಿದ್ದಾರೆ. ಅಲ್ಲಿಂದ ಈ ಕಡೆ ಎಂಥಾ ಕಲ್ಯಾಣ ಮಾಡಲಾಗುತ್ತದೆ.

ಉಪಾಧ್ಯಕ್ಷರು : ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಮಾತನಾಡಿ. ಈಗ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ (ಉಪ-ಮುಖ್ಯಮಂತ್ರಿಯವರು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಾದ ವೈ. ರಾಮಕೃಷ್ಣರವರು ಈ ಮನೆಯ ಹಿರಿಯ ಸದಸ್ಯರು. ಅವರು ಸರಕಾರದಲ್ಲಿದ್ದಂಥವರು ಸರಕಾರ ನಡೆಸಿದಂಥವರು. ಈ ವಿಚಾರವೇನೂ ಹೊಸದಲ್ಲ. ಇದನ್ನು ಕಳೆದವರ್ಷ, ಈ ವರ್ಷ ಹಾಗೂ ಅದಕ್ಕೂ ಹಿಂದಿನ ವರ್ಷದಲ್ಲಿಯೂ ಕೂಡ ಮಾಡಿದ್ದೇವೆ. ಮಾನ್ಯ ಸದಸ್ಯರು ಆರ್ಟಿಕಲ್ 205-ಏನಿದೆ ಅದು ವೈಲೇಟ ಆಗಿದೆ ಎಂದು ಹೇಳಿದ್ದಾರೆ. ಇದು ಯಾವರೀತಿಯ ವೈಲೇಟ ಕೂಡ ಆಗುವುದಿಲ್ಲ. ಆರ್ಟಿಕಲ್ 205-ಎ,ಏನು ಹೇಳುತ್ತದೆ ಅಂದರೆ,

``If the amount authorised by any law made in accordance with the provisions of articles 204 to be expended for a particular service for the current financial year is found to be insufficient for the during the current financial year for supplementary or additional expenditure upon some new service not contemplated in the annual financial statement for that year..."

``New service" ಎಂದು ಇದೆ. ನಾವು ಇಲ್ಲಿ ಬಜೆಟನ್ನು ಮಂಡಿಸಿ ಲೆಜಿಸ್ಲೇಚರನಿಂದ ಒಪ್ಪಿಗೆಯನ್ನು ಪಡೆದುಕೊಂಡ ಮೇಲೆ ಹೊಸ ಬಾಬಿಗೆ ಖರ್ಚು ಮಾಡತಕ್ಕಂಥ ಸಂದರ್ಭ ಬಂದಾಗ, ಅದರಲ್ಲಿ ಇಟ್ಟಿರತಕ್ಕಂಥ ಯಾವುದೇ ಒಂದು ಬಾಬಿಗೆ ಹಣವು ಸಾಲದೇ ಹೋದಾಗ, ಹೀಗೆ ಮಾಡುವುದು ಎಲ್ಲಾ ಕಾಲದಲ್ಲಿಯೂ ನಡೆದುಕೊಂಡು ಬಂದಿರತಕ್ಕಂಥಾದ್ದು. ಇದೇನೂ ಹೊಸ ವಿಚಾರವಲ್ಲ. ಸಪ್ಲಿಮೆಂಟರಿ ಗ್ರ್ಯಾಂಟ್ ಇಟ್ಟು ಅದಕ್ಕಾಗಿಯೇ ಸೆಕ್ಷನ್ 205ನ್ನು ಇಟ್ಟಿರತಕ್ಕಂಥಾದ್ದು. ಇಂಥ ಬಾಬುಗಳಿಗೆ ಹಣವು ಸಾಲದೆ ಹೋದರೆ, ಹೊಸ ಬಾಬುಗಳನ್ನು ಮಾಡಬೇಕಾದರೆ, ಹೊಸ ಕಾರ್ಯಕ್ರಮಗಳನ್ನು ಮಾಡಬೇಕಾದರೆ, ಅದಕ್ಕೆ ಲೇಜಿಸ್ಲೇಚರ್‌ನಲ್ಲಿಟ್ಟು ಪೂರಕ ಅಂದಾಜಿಗೆ ಒಪ್ಪಿಗೆಯನ್ನು ಪಡೆದುಕೊಳ್ಳಬೇಕು. ಇದನ್ನು ಆರ್ಟಿಕಲ್ 205-(ಎ) ನಲ್ಲಿ ವಿವರಿಸುತ್ತದೆ. ಇದರ ಜೊತೆಗೆ ಯಾವ ಖಾತೆಗಳಲ್ಲಿ ಪರಿಶಿಷ್ಟ ಜಾತಿ ಜನಾಂಗದವರಿಗೆ ಹಣಕಾಸನ್ನು ಇಟ್ಟಿರುತ್ತಾರೆ. ಅವುಗಳನ್ನು ಒಟ್ಟಿಗೆ ಸೇರಿಸಿ ಆ ವರ್ಗದ ಜನರಿಗೋಸ್ಕರವೇ ಖರ್ಚು ಮಾಡತಕ್ಕಂಥಾದ್ದು. ಇದರಲ್ಲಿ ಯಾವುದೇ ರೀತಿಯ ದುರುಪಯೋಗವಾಗತಕ್ಕಂಥಾದ್ದಾಗಲೀ, ಆ ಜನರಿಗೆ ಇಟ್ಟಂಥ ಹಣವನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಿ ಖರ್ಚು ಮಾಡತಕ್ಕಂಥಾದಾಗಲೀ ಅಲ್ಲ. ಇನ್ನೂ ಉತ್ತಮ ಸೇವೆಯು ಆ ವರ್ಗದ ಜನರಿಗೆ ಆಗಬೇಕೆಂಬ ಕಾರಣಕ್ಕಾಗಿ, ಅಂಬೇಡ್ಕರ್ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟಿಸಿಕೊಡತಕ್ಕಂಥಾದ್ದು, ಗಂಗಾಕಲ್ಯಾಣ ಯೋಜನೆಯಲ್ಲಿ ಅವರ ಜಮೀನುಗಳಿಗೆ ನೀರನ್ನು ಒದಗಿಸಿಕೊಂಡತಕ್ಕಂಥಾದ್ದು, ರೆಸಿಡೆನಶಿಯಲ್ ಸ್ಕೂಲ ಗಳನ್ನು ಮಾಡಿಕೊಡತಕ್ಕಂಥಾದ್ದು, ಇವೇ ಮುಂತಾಗಿ ಆ ವರ್ಗದ ಜನರಿಗೆ

ಇನ್ನೂ ಹೆಚ್ಚಿನ ಉಪಯೋಗವಾಗಲಿ ಎಂಬ ಸದುದ್ದೇಶದಿಂದ ಮಾಡಿರತಕ್ಕಂಥಾದ್ದು. ಇದರಲ್ಲಿ ಯಾವುದೇ ದುರುಪಯೋಗವಾಗತಕ್ಕಂಥಾದ್ದಲ್ಲ. ಇದರಲ್ಲಿ ಲೆಜಿಸ್ಲೇಚರನ ಅಧಿಕಾರವನ್ನು ಬಿಟ್ಟು ದೂರ ಹೋಗಿರತಕ್ಕಂಥಾದ್ದು ಇಲ್ಲ. ಇಲ್ಲಿ ರಾಜ್ಯಾಂಗದ ವಿಧಿ-ವಿಧಾನಗಳನ್ನು ಕೂಡ ಉಲ್ಲಂಘನೆ ಮಾಡಿರತಕ್ಕಂಥ ಪರಿಸ್ಥಿತಿಯೂ ಇಲ್ಲ. ಆದ್ದರಿಂದ ಮಾನ್ಯ ರಾಮಕೃಷ್ಣರವರು ಎತ್ತಿರತಕ್ಕಂಥಾದ್ದು.

ಶ್ರೀ ಕೆ.ಎಸ್. ಈಶ್ವರಪ್ಪ : ರಾಮಕೃಷ್ಣರೇ? ಅಥವಾ ರಾಮಕೃಷ್ಣ ಹೆಗಡೆಯವರೇ?

ಶ್ರೀ ಸಿದ್ಧರಾಮಯ್ಯ : ನೀವೇಕೆ ರಾಮಕೃಷ್ಣ ಹೆಗಡೆಯವರ ಬಗ್ಗೆ ಹೇಳುತ್ತಿದ್ದೀರಿ? ಅವರು ಹೆಸರು ನಿಮ್ಮ ತಲೆಯಲ್ಲಿ ಏನಾದರೂ ಗುಯಂ ಎನ್ನುತ್ತಾ ಇದೆಯೇ? ನಮಗಂತೂ ಅವರ ಹೆಸರು ತಲೆಯಲ್ಲಿ ಗುಂಯಗುಟ್ಟತ್ತಾ ಇಲ್ಲ. ನಾವು ಅವರನ್ನು ಬಿಟ್ಟು ಬಹಳ ದಿನಗಳು ಆದುವು. ನಿಮಗೇನಾದರೂ ಗುಂಯ ಎನ್ನುತ್ತಾ ಇದೆಯೇ?

ಶ್ರೀ ಕೆ.ಎಸ್. ಈಶ್ವರಪ್ಪ : ಎದೆ ಮುಟ್ಟಿಕೊಂಡು ನೋಡಿ. ಯಾರ ಎದೆ ಗುಂಯ್ ಎನ್ನುತ್ತಿದೆ ಎಂದು ಗೊತ್ತಾಗುತ್ತದೆ.

ಶ್ರೀ ಸಿದ್ಧರಾಮಯ್ಯ : ಮೊದಲು ಯಾರು ಅವರ ಹೆಸರು ಹೇಳಿದ್ದುದು? ರಾಮಕೃಷ್ಣ ಹೆಗಡೆಯವರು ಹೆಸರನ್ನು ಪ್ರಸ್ತಾಪ ಮಾಡಿದವರು ಯಾರು? ವೈ. ರಾಮಕೃಷ್ಣ ಅಂದರೆ ರಾಮಕೃಷ್ಣ ಹೆಗಡೆಯವರು ಎಂದ ಹಾಗೆ ಆಗುತ್ತದೆಯೇ? ನಾವು ರಾಮಕೃಷ್ಣ ಹೆಗಡೆಯವರನ್ನು ಮರೆತು ಬಹಳ ದಿನಗಳಾಯಿತು? ನಿಮಗೇನಾದರೂ ಅವರ ಹೆಸರು ತಲೆಯಲ್ಲಿ ಗುಂಯ.. ಗುಂಯ ಎನ್ನುತ್ತಿದೆಯೇ? ಅವರಂತೂ ನಮ್ಮನ್ನು ಬಿಟ್ಟು ಹೋಗಿದ್ದಾರೆ. ಅವರು ಬೇರೆ ನಾವು ಬೇರೆಯಾಗಿ ಇದ್ದೇವೆ.. ಈಗ ಮಾನ್ಯ ವೈ. ರಾಮಕೃಷ್ಣರವರು ಎತ್ತಿರತಕ್ಕಂಥ ವಿಚಾರದಲ್ಲಿ ಹೇಳುವುದಾದರೆ ಅವರು ಹಿರಿಯ ಸದಸ್ಯರು ಬಹುಶಃ ನಾನು ಹೇಳತಕ್ಕಂಥಾದ್ದನ್ನು ಒಪ್ಪಿಕೊಟ್ಟು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ : ಇದರಲ್ಲಿ ವಿತಡ್ರಾ ಎಂಬ ವರ್ಡ ಎಲ್ಲಿದೆ? ಆ ರೀತಿಯಲ್ಲಿ ಒಂದೇ ಒಂದು ವರ್ಡ ಇದ್ದರೂ ತಾವುಗಳು ತೋರಿಸಿರಿ. ಇದರಲ್ಲಿ ಯಾವುದು ಹೊಸ ಡಿಮ್ಯಾಂಡ್ ಹೇಳಿ. ನೀವೇನು ಮಾಡಿದ್ದೀರಿ? "Construction of Ambekar Houses" is it a new scheme? ನೀವು ಹೊಸ ಸ್ಕೀಮ್ ಮಾಡಿದ್ದೇವೆಂದು ಹೇಳಿದ್ದೀರಲ್ಲ? ಅದು ಯಾವುದು?

ಶ್ರೀ ಸಿದ್ಧರಾಮಯ್ಯ : ಯಾವ ಒಂದು ಬಾಬಿಗೆ ಹೊಸ ಸರ್ವೀಸ್ ಮಾಡುತ್ತೇವೋ ಅದಕ್ಕೆ ಬಜೆಟನಲ್ಲಿ ದುಡ್ಡು ಇಟ್ಟಿರುವುದಿಲ್ಲ. ಅದಕ್ಕೆ ನಾವು ದುಡ್ಡು ಇಟ್ಟರೆ, ಅದು ಹೊಸ ಸೇವೆ ಎಂದು ಆಗುತ್ತದೆ. ಯಾವ ಕಾರ್ಯಕ್ರಮ ಇಲ್ಲ, ಅಥವಾ ಇಟ್ಟಿರತಕ್ಕಂಥ ಹಣವು ಸಾಲುವುದಿಲ್ಲ ಅದನ್ನು ಪೂರಕ ಅಂದಾಜುಗಳ ಮೂಲಕ ಸದನದ ಮುಂದೆ ತೆಗೆದುಕೊಂಡು ಬಂದು, ಸದನದ ಒಪ್ಪಿಗೆಯನ್ನು ಪಡೆದುಕೊಂಡು ಸರಕಾರವು ಖರ್ಚು ಮಾಡಲು 205ನೇ ವಿಧಿಯಲ್ಲಿ ಅವಕಾಶ ಇದೆ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಉಪಾಧ್ಯಕ್ಷರೇ, ಸ್ವಲ್ಪ ಅವಕಾಶ ಕೊಡಿ. ಇವರು ಹೊಸ ಡಿಮ್ಯಾಂಡ್ ಎಂದು ಹೇಳುತ್ತಿದ್ದಾರೆ. ಯಾವುದು ಹೊಸ ಡಿಮ್ಯಾಂಡ್ ಸ್ವಾಮಿ? Financial assistance for construction of Ambedkar Houses. ಇವೆಲ್ಲ ಹೊಸದಾಗಿ ಇವರು

ತಂದಿರುವವೇ? ಗಂಗಾ ಕಲ್ಯಾಣ ಯೋಜನೆ? ಅದೂ ಕೂಡ ಹೊಸದೆ? 200 ಮನೆಗಳು ದೇವದಾಸಿಯರಿಗೆ. ಅದು ಕೂಡ ಹೊಸದೆ? Grants to Slum Clearance Board. ಅದೂ ಕೂಡ ಹೊಸದೇನೆ? ಹರಿಜನರಿಗೆ ಮೀಸಲಾಗಿಟ್ಟಿರತಕ್ಕಂಥ ಹಣವನ್ನು ನೀವು ಯಾರಿಗೆ ಹೊಸದೇನೆ? ಹರಿಜನರಿಗೆ ಮೀಸಲಾಗಿಟ್ಟಿರತಕ್ಕಂಥ ಹಣವನ್ನು ನೀವು ಯಾರಿಗೆ ಕೊಟ್ಟಿದ್ದೀರಿ? ದೇವದಾಸಿಯವರಿಗೆ?.. ಇದರಲ್ಲಿ ಐಟಂ ನಂ-4, ಇದರಲ್ಲಿ ದೇವದಾಸಿಯರಿಗೆ 387 ಲಕ್ಷ ರೂ.ಗಳು. ಸ್ಲಂ ಕ್ಲೀಯರೆನ್ಸಗೆ ಶೆಡ್ಯೂಲ್ಡ ಕ್ಲಾಸನವರ ಹಣ, ಹಾಗಾದರೆ ಅದಕ್ಕೆ ಒಂದು ಹೆಡ ಇಲ್ಲವೆ?

ಉಪಾಧ್ಯಕ್ಷರು : ಅವರು ಹೇಳುವುದು ಸ್ಲಂ ಕ್ಲಿಯರೆನ್ಸ್‌ನಲ್ಲಿದ್ದಂಥ ಹಣದಿಂದ ಶೆಡ್ಯೂಲ್ಡ್ ಕಾಸ್ಟ್‌ನವರಿಗೆ ಮಾಡುತ್ತೇವೆ ಎಂದು ಹೇಳುತ್ತಾರೆ.

ವೈ. ರಾಮಕೃಷ್ಣ : ಇರತಕ್ಕಂಥ ಕಾಂಪೋನೆಂಟ್ ಪ್ಲಾನ್‌ನಲ್ಲಿ ಸಂಕ್ಲೀಯರೆನ್ಸ್ ಬಂದಿದೆಯಲ್ಲವೆ?

ಶ್ರೀ ಹೆಚ್.ಡಿ. ಬಸವರಾಜು : ಇದು ಸರಿಯಲ್ಲ.....

ಉಪಾಧ್ಯಕ್ಷರು : ನಿಮ್ಮ ನಾಯಕರು ಮಾತನಾಡುತ್ತಿದ್ದಾರೆ, ನೀವು ಕುಳಿತುಕೊಳ್ಳಿ...

ಶ್ರೀ ವೈ. ರಾಮಕೃಷ್ಣ : ಆ ಮೇಲೆ redundant items. ಅದಕ್ಕೆ ಎರೆಡೆರಡು ಸರ್ತಿ ಇವರು ಹಣವನ್ನು ತೆಗೆದುಕೊಂಡರು. ಐಟಂ ನಂ-17 ಮತ್ತು 27. 17 ಅಂದರೆ ಹೈದ್ರಾಬಾದ್ ಕರ್ನಾಟಕದ ಡೆವಲಪಮೆಂಟ್ ಬೋರ್ಡ. ಐಟಂ ನಂ-27,ಇದು ಹೈದ್ರಾಬಾದ್ ಕರ್ನಾಟಕ ಬೋರ್ಡ್. ಅಂದರೆ ಎರಡೆರಡು ಸರ್ತಿ ಬಂತು. ಆ ಮೇಲೆ ಐಟಂ ನಂ-18 ಮತ್ತು 28. 18ರಲ್ಲಿ ಏನಿದೆಯೋ 28ರಲ್ಲಯೂ ಅದೇ ಇದೆ. 18 ಅಂದರೆ ಬಾರ್ಡರ್ ಡಿಸ್ಟ್ರೀಕ್ಟ್ ಡೆವಲಪ್‌ಮೆಂಟ್ ಏರಿಯಾ. 28 ಏನು ಹೇಳುತ್ತದೆ ಅಂದರೆ ಬಾರ್ಡರ್ ಡೆವಲಪ್‌ಮೆಂಟ್ ಏರಿಯಾ ಇದೇನು? ಇದು ನಮಗೆ ಅರ್ಥವಾಗಬೇಕಲ್ಲವೆ? ಹಾಗೆಯೇ 8,30,9-31, 12-32, 08-33, 5-30, 15-34, ಯಾರು ಇದನ್ನು ಮಾಡಿದವರು? ಇದನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ಹರಿಜನರ ದುಡ್ಡು ಅಂದರೆ ಇವರಿಗೆ ಬೇಕಾಬಿಟ್ಟಿಯಾಗಿ ಬಿಟ್ಟಿದೆ. ಇಲ್ಲಿ ನಾನು ಉದ್ದೇಶದ ಪ್ರಶ್ನೆಯನ್ನು ಮಾಡುವುದಿಲ್ಲ. ನಾನು ಈಗ ಹೇಳಿದ ಐಟಂ ನಂಬರ್‌ಗಳ ಬಗ್ಗೆ ಹೇಳಿ. 17ನೇ ಐಟಂ ನೋಡಿ. ಅದು ಹೈದ್ರಾಬಾದ ಏರಿಯಾ ಡೆವಲಪ್‌ಮೆಂಟ್ ಬೋರ್ಡ್. ಇದಕ್ಕೆ 14 ಕೋಟಿ 47 ಲಕ್ಷವನ್ನು ವಿತ್‌ಡ್ರಾ ಮಾಡಿದ್ದೀರಿ. 27ನೇ ಐಟಂಗೆ ಎಷ್ಟು ವಿತ್‌ಡ್ರಾ ಮಾಡಿದ್ದೀರಿ? 260 ಲಕ್ಷಗಳು. ನೀವು ಕೊಟ್ಟಿರುವ ಪುಸ್ತಕದಲ್ಲಿನ ವಿವರಗಳನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ : ಇದರಲ್ಲಿ ಎಸ್‌ಸಿಪಿ ಮತ್ತು ಟ್ರೈಬಲ್ ಪ್ಲಾನ್‌ನಲ್ಲಿ ಎರಡರಲ್ಲಿಯೂ ಮಾಡಿರುವುದು. ಅಂದರೆ ಎರಡೆರಡು ಸಾರಿ ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಒಂದು ತೀರ್ಮಾನವಾಗಲಿ. ಈಗ ಅವರು ಆರ್ಟಿಕಲ್ -205 ಮತ್ತು ಆರ್ಟಿಕಲ್ 204ರಲ್ಲಿ ಅಪ್ರೋಪ್ರಿಯೇಶನ್ ಬಿಲ್ ಮತ್ತು 203 ಪ್ರಕಾರ ಈ ಫೈನಾನ್‌ಶಿಯಲ್ ವಿಚಾರಕ್ಕೆ ಪ್ರೊಸೀಜರ್ ಫಾಲೋ ಮಾಡಬೇಕಾಗಿತ್ತು. ಅದನ್ನು ಮಾಡಿಲ್ಲ ಎಂಬುದು ಅವರ ವಾದವಾಗಿದೆ. ಅದಕ್ಕೆ ರೂಲಿಂಗ್ ಬರಬೇಕು. ಇವ್ಹೊತ್ತು ಆರ್ಟಿಕಲ್ 205ರ ಪ್ರಕಾರ ತಂದಂಥ ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ರಿ-ಅಪ್ರೋಪ್ರಿಯೆಶನ್ ಮಾಡಿಕೊಂಡು ಅಥವಾ ಹಣವನ್ನು ರಿ-

ಅಲೋಕೇಶನ್ ಮಾಡಿಕೊಂಡು ಇವೊತ್ತು ಏನು ತಂದಿದ್ದಾರೆ ಅದು ಸರಿಯೋ? ತ್ತುಪ್ಪೋ? ಎಂದು ಹೇಳಬೇಕು. ಅವರು ಹೇಳಿದ ಪ್ರಕಾರ ಆರ್ಟಿಕಲ್ 205ರ ಪ್ರಕಾರ ಇದು ಕಾನ್ಷಿಟ್ಯೂಶನಲ್, ಇಶ್ಯೂ ಇದೆ, ಇವೊತ್ತು ರಿ-ಅಲೋಕೇಶನ್ ಮಾಡಿಕೊಂಡಿರುವುದು ಅನ್-ಕಾನ್ಷಿಟ್ಯೂಶನಲ, ಇದು ಬರುವುದಿಲ್ಲ ಎಂದು ಹೇಳುತ್ತಿದ್ದಾರೆ. ಇವೊತ್ತು ನೀವು ಫ್ಲೇಗೌಂಡ್‌ಗೆ 13 ಕೋಟಿ ರೂ.ಗಳನ್ನು ಹೆಚ್ಚುವರಿ ಕೊಟ್ಟಿದ್ದೀರಿ. ಅದನ್ನು ಏಕೆ ಕೊಟ್ಟರು? ಹೇಗೆ ಕೊಟ್ಟರು? ಎಂದು ಬರುತ್ತದೆ. ಎಸ್ಟಿಮೇಟ್ ಎಷ್ಟು ಜಾಸ್ತಿಯಾಯಿತು? ಜಿಟ್ಟಿದ್ದಾರೋ ಎಂಬ ಮಾತು ಬೇರೆ. ನಿಮ್ಮ ಉದ್ದೇಶವು ಒಳ್ಳೆಯದಿದ್ದರೂ ಕೂಡ ಸಂವಿಧಾನದ ಈ ಹಣವನ್ನು ರಿಅಲೋಕೇಟ್ ಮಾಡುವುದಕ್ಕೆ ಆಸ್ಪದ ಇದೆಯೋ? ಇಲ್ಲವೋ ಎಂಬ ಬಗ್ಗೆ ತೀರ್ಮಾನ ಮೊದಲು ಆಗಬೇಕು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ರಾಜ್ಯಾಂಗದಲ್ಲಿ ಮಂಡಿಸಿದಾಗ, ನಾವು ಇಟ್ಟಿರುವ ಹಣ ಸಾಲದೇ ಹೋದಾಗ, ಅಥವಾ ಬೇರೆ ಹೊಸ ಬಾಬಿಗೆ ಹಣವನ್ನು ಒದಗಿಸತಕ್ಕಂತಹ ಕಂಟಿಂಜೆನ್ಸಿ, ಫಂಡನಲ್ಲಿ ಖರ್ಚು ಮಾಡಬೇಕಾದ ಪರಿಸ್ಥಿತಿ ಬಂದಾಗ, ಲೆಜಿಸ್ಲೇಚರ್ ಮುಂದೆ ತಂದ ಪೂರಕ ಅಂದಾಜನ್ನು ಮಂಡಿಸುವ ಮೂಲಕ ಮತ್ತು ಇಲ್ಲಿ ಒಪ್ಪಿಗೆ ಪಡೆಯುವ ಅವಕಾಶ ರಾಜ್ಯಾಂಗದಲ್ಲಿ ಇದೆ. ಬೇರೆ ಬೇರೆ ಇಲಾಖೆಗಳಲ್ಲಿ ಪರಿಶಿಷ್ಟ ಜಾತಿ ವರ್ಗದವರಿಗೆ ಖರ್ಚು ಮಾಡುವಂತಹ ಹಣವನ್ನು ವಾಪಸ್ ಪಡೆದು, ಒಂದು ಕಡೆ ಪೂಲ್ ಮಾಡಿ ಅದೇ ವರ್ಗದ ಜನರಿಗೆ ರೀ ಅಲೊಕೇಟ್ ಮಾಡಿದ್ದೇವೆ. ಆದ್ದರಿಂದ ಇದು ರಾಜ್ಯಾಂಗ ಬದ್ಧವಾಗಿಯೇ ಇದೆ. ಆದ್ದರಿಂದ ಈ ಪ್ರಪೋಸಲ್ಲಅಂದರೆ ರೀ ಅಲೊಕೇಷನ್ ಪ್ರಪೋಸಲ್ಸ್ ಅನ್ನು ಲೆಜಿಸ್ಲೇಚರ್ ಮುಂದೆ ಇಟ್ಟಿದ್ದೇವೆ. ರಾಜ್ಯಾಂಗದಲ್ಲಿ ಈ ರೀತಿ ಲೆಜಿಸ್ಲೇಚರ್ ಮುಂದೆ ಪ್ರಪೋಸಲ್ ಇಟ್ಟು ಇಲ್ಲಿ ಒಪ್ಪಿಗೆ ಪಡೆಯುವ ಅವಕಾಶ ಇದೆ. ಹೊಸ ಸೇವೆಗಳು ಎಂದು ಏನಿದೆ, ಆ ವ್ಯಾಪ್ತಿಯಲ್ಲಿ ಇದೂ ಕೂಡ ಬರುತ್ತದೆ. ಹಣವನ್ನು ಲೆಜಿಸ್ಲೇಚರ್‌ನಲ್ಲಿ ಒಪ್ಪಿಗೆ ಪಡೆದದ್ದಕ್ಕಿಂತ ಹೆಚ್ಚು ಖರ್ಚು ಮಾಡುತ್ತಿದ್ದೇವೆ, ಇಲ್ಲವೇ ಲೆಜಿಸ್ಲೇಚರ್ ಮುಂದೆ ಒಪ್ಪಿಗೆ ತೆಗೆದುಕೊಳ್ಳದೆ ಹೊರಗೆ ಹೋಗಿದ್ದೇವೆ ಎನ್ನುವ ವಿಚಾರ ಇಲ್ಲಿ ಉದ್ಭವವಾಗುವುದಿಲ್ಲ. ಇದು ರಾಜ್ಯಾಂಗದ ವ್ಯಾಪ್ತಿಯಲ್ಲಿ ಇದೆ. ಹೊಸ ಸೇವೆಗಳಿಗೆ ಸರಕಾರ ಲೆಜಿಸ್ಲೇಚರ್ ಮುಂದೆ ಪ್ರಪೋಸಲ್‌ನ ಪ್ರಸ್ತಾವವನ್ನು ತೆಗೆದುಕೊಂಡು ಬಂದು ಒಪ್ಪಿಗೆ ಪಡೆಯಲು ಅವಕಾಶ ಇರುವುದರಿಂದ, ರಾಜ್ಯಾಂಗ ಬದ್ಧವಾಗಿ ಇದೆ ಎಂದು ನಾನು ಸಭೆಗೆ ತಿಳಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾಳೆ ತೆಗೆದುಕೊಳ್ಳಿ. ವಿವರವಾಗಿ ಚರ್ಚೆ ಮಾಡಬಹುದು.

ಶ್ರೀ ಸಿದ್ದರಾಮಯ್ಯ : ನಾಳೆ ನಾನು ಇರುವುದಿಲ್ಲ.

ಉಪಾಧ್ಯಕ್ಷರು : ಅವರು ನಾಳೆ ಬೇರೆ ಕಡೆಗೆ ಹೋಗುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಪ್ರೋಪ್ರಿಯೇಷನ್ ಬಿಲ್ ಬರಬೇಕಲ್ಲ ಆಗ ಇದೂ ಬರುತ್ತದೆ. ಡಿಮ್ಯಾಂಡ್ ನಂ. 7,9,3,11,4, ಇದೆ. ನಾಳೆ ಮಾನ್ಯ ನಾಣಯ್ಯನವರೇ ಉತ್ತರ ಕೊಡಬಹುದು.

ಶ್ರೀ ವೈ. ರಾಮಕೃಷ್ಣ : ಮಾನ್ಯ ಏರ್ಗೆಯವರು ಹೇಳಿದ್ದನ್ನು ನಾನು ಪುಷ್ಟೀಕರಿಸುತ್ತೇನೆ. ನಮ್ಮದು ನಡೆಯುತ್ತದೆಂದು ಅಕ್ರಮವಾಗಿ ಇಷ್ಟೊಂದು ದೊಡ್ಡ ಮೊತ್ತದ ಹಣ ಪಡೆದು ಹರಿಜನರಿಗೆ ಮನೆ ಕಟ್ಟುವುದು ಅಲ್ಲ. ನೂರು ಮನೆಗಳನ್ನು ಕೊಟ್ಟರು. ಅಂದರೆ 1-1 ಕ್ಷೇತ್ರದಲ್ಲಿ 300 ಹಳ್ಳಿಗಲು ಇದ್ದರೆ, 3 ಹಳ್ಳಿಗೆ ಒಂದು ಮನೆ ಕಟ್ಟಿದರೆ Is it a scheme for the amelioration of the Scheduled Caste? ಇದನ್ನು ಯಾರು ನಿಮಗೆ ಹೇಳಿಕೊಟ್ಟರು. xx ದೆಹಲಿಯಲ್ಲಿ ಪ್ಲಾನಿಂಗ್ ಕಮಿಷನ್ ಕೇಳಿ, State Commission ಕೇಳಿ. ನೀವು ಕ್ಯಾಬಿನೆಟನಲ್ಲಿ ಕುಳಿತುಕೊಂಡು ಬಿಟ್ಟರೆ ನೀವೇನು ಮಹಾ. ಇವರು ಹರಿಜನಗಿರಿಜನರಿಗೆ ಅನ್ಯಾಯ, ಮೋಸ ಮಾಡಿದ್ದಾರೆ. ಅವರಿಗೆ ಮನೆ ಕಟ್ಟಿಕೊಡುತ್ತೇವೆಂದು ಹೇಳಿ ವಿದ್ಯಾಭ್ಯಾಸಕ್ಕೆ ಇತರ ಪ್ರತಿಯೊಂದಕ್ಕೂ ಮಟ್ಟಹಾಕಿದ್ದಾರೆ. ಇದನ್ನು ಪ್ರತಿಭಟಿಸಿ ಆಚೆ ಹೋಗುತ್ತಿದ್ದೇನೆ. ಯಾವ ರೀತಿ ನೀವು ಮನೆ ಕಟ್ಟುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ : ಮಹಾರಾಷ್ಟ್ರದಲ್ಲಿ ನಿಮ್ಮ ಸರಕಾರವೇನು ಮಾಡುತ್ತಿದೆ ಹೋಗಿ ನೋಡಿಕೊಂಡು ಬನ್ನಿ. ಅವರೂ ಇದೇ ಮಾಡುವುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮೋಸ ಮಾಡುತ್ತಿದ್ದಾರೆ ಎಂದರೆ ಏನು? I donot agree ಸರಕಾರ ಸದುದ್ದೇಶದಿಂದ ಇದನ್ನು ಮಾಡಿರತಕ್ಕಂಥಾದ್ದು. ಬಡವರಿಗೆ ಹಿಂದೆ ಅನೇಕ ಇಲಾಖೆಗಳಲ್ಲಿ ಸವಲತ್ತುಗಳು ಸರಿಯಾಗಿ ಸಿಗುತ್ತಿರಲಿಲ್ಲ. ಅವರಿಗೆ ಸವಲತ್ತುಗಳು ಸಂಪೂರ್ಣವಾಗಿ ಸಿಗಬೇಕು, ಅಂತಹ ಅಸೆಟ್ಸ ನಿರ್ಮಾಣವಾಗಬೇಕೆನ್ನುವ ಕಾರಣಕ್ಕೋಸ್ಕರ ಬಡವರಿಗೆ ನೀರು, ಮನೆ ಕಟ್ಟಿಕೊಡಬೇಕು ಬಡವರ ಮಕ್ಕಳಿಗೆ ವಿದ್ಯೆ ಕೊಡಬೇಕೆನ್ನುವ ಕಾರಣಕ್ಕೋಸ್ಕರ ಮಾಡತಕ್ಕಂತಹ ಹೇಳಿಕೆಗಳೇ ಹೊರತು ಬೇರೇನೂ ಇಲ್ಲ. ಅದಕ್ಕೋಸ್ಕರ ವಿರೋಧ ಮಾಡುತ್ತಿದ್ದಾರೆ ಬೇರೇನೂ ಇಲ್ಲ. ಹರಿಜನರ ಬಗ್ಗೆ ಮಾತನಾಡಲಿಕ್ಕೆ ನಾಚಿಕೆಯಾಗಬೇಕು. ಹರಿಜನರ, ಹಿಂದುಳಿದವರ ಬಗ್ಗೆ ಇವರಿಗೆ ಮಾತನಾಡಲಿಕ್ಕೆ ಯಾವ ನೈತಿಕ ಹಕ್ಕು ಇದೆ.

ಉಪಾಧ್ಯಕ್ಷರು : ಈಗಾಗಲೇ ಮಾನ್ಯ ವೈ. ರಾಮಕೃಷ್ಣರವರು ಏನು ಪಾಯಿಂಟ್ ಔಟ್ ಮಾಡಿದರು, ಅದನ್ನು ನಾನು ಕೇಳಿದೆ. ಉಪ ಮುಖ್ಯಮಂತ್ರಿಗಳ ಉತ್ತರವನ್ನು ನಾನು ಕೇಳಿದ್ದೇನೆ. ಅವರು ಸಂವಿಧಾನ ಬದ್ಧವಾಗಿ ಸರಕಾರದ ವತಿಯಿಂದ ಹೇಳಿದ್ದುದು ಸರಿಯಾಗಿದೆ ಆದ್ದರಿಂದ ತಾವು ಚರ್ಚೆ ಪ್ರಾರಂಭ ಮಾಡಬಹುದು

(ಈ ಹಂತದಲ್ಲಿ ಮಾನ್ಯ ಬಿ.ಜೆ.ಪಿ. ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರೀ ಅಲೋಕೇಟ ಸ್ಪೆಷಲ್ ಕಾಂಪೊನೆಂಟ್ ಅಮೌಂಟ್ ಸರಿಪಡಿಸಿಕೊಳ್ಳುವುದು ಇದರಲ್ಲಿ ಇದೆ ಎಂದು ಹೇಳುತ್ತೀರೋ?

(xx) ಈ ಪದಗಳನ್ನು ಉಪಾಧ್ಯಕ್ಷರ ಅಪ್ಪಣೆ ಮೇರೋ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ವೈ. ರಾಮಕೃಷ್ಣರವರು ಈ ರಾಜ್ಯದ ಸಂಸದೀಯ ವ್ಯವಹಾರಗಳ ಮಂತ್ರಿಗಳಾಗಿದ್ದಂತಹವರು. 45 ಬಾರಿ ಸದನದ ಸದಸ್ಯರಾಗಿದ್ದರು. ಹರಿಜನಗಿರಿಜನರ ಬಗ್ಗೆ ಹಿಂದುಳಿದವರ ಬಗ್ಗೆ ಅವರಿಗೆ ಎಷ್ಟು ಕಾಳಜಿ ಇದೆಯೋ, ನಮಗೆ ಅಷ್ಟೇ ಕಾಳಜಿ ಇದೆ. ಇಲ್ಲಿರತಕ್ಕಂತಹವರು ಹಿಂದುಳಿದವರ ಹರಿಜನಗಿರಿಜನರ ವಿರೋಧಿಗಳು ಅಲ್ಲ. ಅವರು ಹೇಳಿರತಕ್ಕಂತಹ ಮಾತುಗಳು ಕಡತದಲ್ಲಿ ಹೋಗಬಾರದೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಯಾರ ಪರವಾಗಿ ಇದ್ದಾರೆಂದು ಹೇಳುತ್ತಿದ್ದಾರೆ. ಶಿವಸೇನಾ ಬಿ.ಜೆ.ಪಿ. ಯವರು ಮಹಾರಾಷ್ಟ್ರದಲ್ಲಿ ಅಧಿಕಾರಕ್ಕೆ ಬಂದ ತಕ್ಷಣ ಮಾಡಿದ ಮೊದಲನೇ ಕೆಲಸವೆಂದರೆ ಹರಿಜನರಿಗೆ ರಕ್ಷಣೆ ಕೊಡಬೇಕೆಂದು ಪಿ ಸಿ. ಆರ್. ಆಕ್ಟನಲ್ಲಿ ಏನೇನು ಕೇಸುಗಳನ್ನು ಹಾಕಿದ್ದರು ಆ ಎಲ್ಲಾ ಕೇಸುಗಳನ್ನು ವಿತಡ್ರಾ ಮಾಡಿದ ಮಹಾಶಯರ ಜೊತೆಯಲ್ಲಿ ಇವರು ಇದ್ದಾರೆ. (xx) ಅದು ರೆಕಾರ್ಡಿನಲ್ಲಿ ಇರಬಾರದು (xx) ಎಂದರೆ ಅರ್ಥವೇನು ?

ಉಪಾಧ್ಯಕ್ಷರು : ಆಯಿತು ಕಡತದಿಂದ ತೆಗೆದು ಹಾಕಿ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲಿ ಅಲೋಕೇಷನ್ ಆದಂಥಾದ್ದು ಸರಿ ಇದೆ ಎಂದು ತೀರ್ಮಾನವನ್ನು ತಾವು ಕೊಟ್ಟ ಮೇಲೆ ನಿಮ್ಮ ಜೊತೆ ಜಗಳ ಆಡುವುದಕ್ಕೆ ನಾವು ಸಿದ್ಧರಿಲ್ಲ. ಅದು ಆಗುವುದಿಲ್ಲ. ಆದರೆ ಅವರ ಜೊತೆ ಜಗಳ ಆಡಬಹುದಿತ್ತು. ಆದರೆ ಕಾರಣಾಂತರದಿಂದ ತಮ್ಮ ಮಾತನ್ನು ಸಮರ್ಥನೆ ಮಾಡಿಕೊಂಡರು. ಯಾವುದೇ ಹಣವನ್ನು ನಾವು ರೀ ಅಲೋಕೇಟ್ ಮಾಡಿಕೊಳ್ಳಬೇಕೆಂದರೆ ಅದರಲ್ಲಿ 205 ಆರ್ಟಿಕಲನಲ್ಲಿ ಇರುವುದು ಏನೆಂದರೆ ನೀವೇನು ಬಡ್ಜೆಟ್ಟಿನಲ್ಲಿ ಪ್ರಾವಿಜನ್ ಮಾಡಿಕೊಳ್ಳುತ್ತಿದ್ದೀರಿ, ಅದಕ್ಕಿಂತ ಹೆಚ್ಚಿನ ಹಣ ಅಥವಾ ಎಕ್ಸಸ ಅಮೌಂಟ್ ಅಥವಾ ನಿಮಗೆ ಬೇಕಾದರೆ ಹೆಚ್ಚಿನ ಕಾರ್ಯಕ್ರಮ ಹಾಕಿಕೊಂಡಾಗ ಕೊಟ್ಟರೆ ಸರಿ. ಇದ್ದ ದುಡ್ಡಿನಲ್ಲೇ ರೀ-ಅಲೊಕೇಷನ್. ಸಪ್ಲಿಮೆಂಟರಿ ಹಣ, ಎಕ್ಸಸ ಗ್ರ್ಯಾಂಟ್ ಅಲ್ಲ. ಇದೇನು ತೋರಿಸುತ್ತಿದೆ ಎಂದರೆ ಇದು ಆರ್ಟಿಕಲ್ 205ರಲ್ಲಿ ನಿಜವಾಗಲೂ ಬರುವುದಿಲ್ಲವೆಂದು ನಾನು ಮತ್ತೊಮ್ಮೆ ತಮಗೆ ಅಪೀಲು ಮಾಡುತ್ತೇನೆ. ಸ್ಪೆಷಲ್ ಕಾಂಪೊನೆಂಟ್ ವಿಶಿಷ್ಟವಾದಂತಹ ಉದ್ದೇಶಕ್ಕೆ, ಗುರಿಗಾಗಿ ಇಟ್ಟಂತಹ ಹಣ. ಆ ಹಣಕ್ಕಿಂತಲೂ ಹೆಚ್ಚು ಇದೆ. ನೀವು ಆ ಇಲಾಖೆಯಲ್ಲಿ ಖರ್ಚು ಮಾಡುತ್ತಿದ್ದರೆ ಅದು ಆರ್ಟಿಕಲ್ 205ರಲ್ಲಿ ಬರುತ್ತದೆ. ಇದ್ದ ಹಣವನ್ನು ಹತ್ತುರೂಪಾಯಿಯನ್ನು ಆ ಜೇಬಿನಲ್ಲಿ ತೆಗೆದು ಈ ಜೇಬಿಗೆ ಹಾಕುವುದು ಲಿಫ್ಟನಿಂದ ರೈಟಿಗೆ ಹಾಕುವುದು. ಹತ್ತು ರೂಪಾಯಿಯನ್ನು ಖರ್ಚು ಮಾಡುವಲ್ಲಿ 15 ರೂಪಾಯಿ ಮಾಡುತ್ತೇವೆಂದು ಇಲ್ಲಿಗೆ ನಮ್ಮ ಮುಂದೆ ಬಂದಿದ್ದರೆ, ಆ 5 ರೂಪಾಯಿ ಎಕ್ಸಸ ಬಡವರಿಗೋಸ್ಕರ ಖರ್ಚು ಮಾಡುತ್ತೇವೆ ನಮಗೆ ಸಹಾಯ ಮಾಡಿ ಎಂದಿದ್ದರೆ ಅದರಲ್ಲಿ ಅರ್ಥ ಇದೆ. ಆದರೆ ಆ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ. ನೋಡುವ ಅವಶ್ಯಕತೆ ಇದೆ ತಾವು ಕೊಟ್ಟಿದ್ದೀರಿ. ಆದರೂ ಕೂಡ ನಾನು ತಮಗೆ ಮನವರಿಕೆ ಮಾಡುವುದಕ್ಕೋಸ್ಕರ ಪುನಃ ನಾನು ಹೇಳುತ್ತಿದ್ದೇನೆ. ಆರ್ಟಿಕಲ್ 203ರಲ್ಲಿ ಏನು ಹೇಳುತ್ತದೆ. ಎಂದರೆ Procedure in Legislature with respect to estimates; So much of the estimates as relates to expenditure charged upon the Consolidated Fund of the State shall not be submitted to the

vote of Legislative Assembly but nothing in the Clause shall be construed as preventing the discussion in the Legislature of any of those estimates. So much of the said estimates as relates to the other expenditure. Shall be submitted in the form of demands for grants in the Legislative Assembly.

6.50 ಪಿ.ಎಂ

(2) So much of the said estimates as relates to other expenditure shall be submitted in the form of demands for grants to the Legislative Assembly, and the Legislative Assembly shall have power to assent, or to replace to assent, to any demand, or to assent to any demand subject to a reduction of the amount, specified therein.

No demand for a grant shall be made except on the recommendations of the Governor.

204ರಲ್ಲಿ 203 ರೆಫರ್ ಮಾಡಿದೆ. ಅದಕ್ಕಾಗಿ 205ರಲ್ಲಿ 204 ರೆಫರ್ ಮಾಡಿದೆ. 203, 204 205 ಇವುಗಳು ಹೆಚ್ಚುಕಡಿಮೆ ಒಂದಕ್ಕೊಂದು ಪೂರಕವಾಗಿರತಕ್ಕಂಥ ಆರ್ಟಿಕಲಗಳು. ಅದಕ್ಕೆ ಇಲ್ಲಿ ಬರುವುದಿಲ್ಲವೆನ್ನುವ ಪ್ರಶ್ನೆ ಏಕೆ ಬಂತು ಎಂದರೆ ವೆಲಫೇರ್ ಮೆಜರ್ಸ್‌ಗೋಸ್ಕರ ಸ್ಪೆಷಲ್ ಕಾಂಪೋನೆಂಟ್‌ನಲ್ಲಿ ಅನೇಕ ಸಲ ಕೇಂದ್ರ ಸರ್ಕಾರದ ಹಣ ಇರುತ್ತದೆ. ನಮ್ಮ ಸರ್ಕಾರದವರು ಕೂಡ ಅದಕ್ಕೆ ಪೂರಕವಾಗಿ ಕೆಲವು ಹಣವನ್ನು ಇಟ್ಟಿರುತ್ತಾರೆ. ಅದು ಶೇಕಡ 75ರಷ್ಟು ಕಾಂಟ್ರಿಬ್ಯೂಷನ್ ಇರಬಹುದು, ಅಥವಾ 50-50 ಪರ್ಸೆಂಟ್ ಕೂಡ ಇರಬಹುದು ಅಥವಾ ಅನೇಕ ಬಾರಿ 5-10 ಪರ್ಸೆಂಟ್ ಕೂಡ ಇರಬಹುದು. ಅದಕ್ಕಾಗಿ ಈ ಒಂದು ಸಂದರ್ಭದಲ್ಲಿ ರೀ-ಅಲೊಕೇಷನ್ ಮಾಡತಕ್ಕಂಥಾದ್ದು ಸರಿಯಲ್ಲ ಎನ್ನುವ ವಾದ ಬಂದಿದ್ದು ಇದೆ. ಅದಕ್ಕಾಗಿ ತಾವು ಏನು ಆದೇಶವನ್ನು ಕೊಟ್ಟಿದ್ದೀರಿ, ಇದನ್ನು ಪುನರ್ ಪರಿಶೀಲಿಸಬೇಕು ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ, ಅದರ ಜೊತೆಯಲ್ಲಿ ನಾನು ಕೊಟ್ಟಿದ್ದೆ ಸರಿ ಎಂದರೆ ಈಗ ನಿಮ್ಮ ವಿರುದ್ಧವಾಗಿ ಪ್ರತಿಭಟನೆ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಒಂದು ಮಾತನ್ನು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಸಪ್ಲಿಮೆಂಟರಿ ಎಸ್ಟಿಮೇಟನಲ್ಲಿ ತಾವು ಒಂದಲ್ಲ ಎರಡಲ್ಲ ಅನೇಕ ಇಲಾಖೆ ಮೇಲೆ ಹೆಚ್ಚಿನ ಹಣವನ್ನು ಖರ್ಚು ಮಾಡಿದ್ದೀರಿ. ಈಗ ಉದಾಹರಣೆಗಾಗಿ ತಮಗೆ ಹೇಳಬೇಕಾದರೆ ಮಹದೇವ ಟೆಕ್ಸ್‌ಟೈಲ ಮಿಲ್ಸ. ಇವತ್ತು ಮುಂಜಾನೆ ಅದರ ಬಗ್ಗೆ ಯಾರೋ ಒಬ್ಬರು ಸದಸ್ಯರು ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಪ್ರಶ್ನೆ ಕೂಡ ಬಂದಿತ್ತು. ಇವತ್ತು ಏನಾಗಿದೆ ಎಂದರೆ ಇಂತಹ ಮಿಲ್‌ಗಳು ಅನೇಕ ಕಡೆ ಕೆಟ್ಟ ಸ್ಥಿತಿಯಲ್ಲಿ ಇದೆ. ಉದಾಹರಣೆಗೆ ಬಿಜಾಪುರದಲ್ಲಿ ಕೋ-ಆಪರೇಟಿವ್ ಟೆಕ್ಸ್‌ಟೈಲ್ ಮಿಲ್ ಇದೆ, ಬಾಗಲಕೋಟೆಯಲ್ಲಿ

(xx) ಈ ಪದಗಳನ್ನು ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಇದೆ. ಗುಲ್ಬರ್ಗಾದಲ್ಲಿ ಎಂ.ಎಸ್.ಕೆ. ಮಿಲ್ ಇದೆ. ಹೀಗೆ ಅನೇಕ ಕಡೆ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್‌ನಿಂದ ಹಣ ಪಡೆದುಕೊಂಡು ಕೂಡ ಸರಿಯಾಗಿ ನಡೆದಿಲ್ಲ. ಕೆಲವು ಕಡೆ ರಾಜ್ಯಸರ್ಕಾರ ಹಣ ಕೊಟ್ಟಿದೆ. ಮಹದೇವ ಟೆಕ್ಸ್‌ಟೈಲ್ ಮಿಲ್‌ಗಳಿಗೆ ನೇರವಾಗಿ ಹಣ ಕೊಟ್ಟು, ದುರಸ್ತಿ ಮಾಡತಕ್ಕಂಥ ಕೆಲಸವನ್ನು ಇವತ್ತು ಮಾಡಿದಿರಿ. ಆದರ ಇದು ಎಷ್ಟರಮಟ್ಟಿಗೆ ಸರಿ. ಇವತ್ತು ಅವುಗಳು ಯಾವ ಸ್ಥಿತಯಲ್ಲಿವೆ? ಅದನ್ನು ಏನಾದರೂ ರಿಕವರ್ ಮಾಡುವುದಕ್ಕೆ ಆಗುತ್ತದೆಯೇ? ಅಥವಾ ನೀವು ಕೇಂದ್ರಸರ್ಕಾರಕ್ಕೆ ಇಂತಹ ಮಿಲಗಳನ್ನು ತೆಗೆದುಕೊಂಡು ನೇರವಾಗಿ ಅವರೇ ನಡೆಸಬೇಕು ಎಂದು ಏಕೆ ಮಾಡಬಾರದು? ಇವತ್ತು ನ್ಯಾಷನಲ್ ಟೆಕ್ಸ್ ಟೈಲ್ ಮಿಲ್‌ಗಳು ಎಲ್ಲಾ ಕಡೆ ಲುಕ್ಸಾನು ಇದ್ದರೂಕೂಡ ಕೆಲವು ಕಡೆ ಹೆಚ್ಚಿನ ಹಣವನ್ನು ಕೊಟ್ಟು ಅದಕ್ಕೆ ಎಕ್ಸ್‌ಪ್ಯಾನಷನ ಮಾಡುತ್ತಿದ್ದಾರೆ. ಅಥವಾ ರೀ-ಆರ್ಗನೈಸೇಷನ್ ಮಾಡುತ್ತಿದ್ದಾರೆ. ಉದಾಹರಣೆಗೆ ಕೇರಳದಲ್ಲಿ ಸಾಕಷ್ಟು ಟೆಕ್ಸ್‌ಟೈಲ್ ಮಿಲ್‌ಗಳಿಗೆ ಕೇಂದ್ರಸರ್ಕಾರದ ಹಣವನ್ನು ಕೊಟ್ಟು ಅದಕ್ಕೆ ಪುನಶ್ಚೇತನಗೊಳಿಸಬೇಕು ಎಂದು ಹೇಳಿ ನೇರವಾಗಿ ಅವರೇ ಬಂಡವಾಳವನ್ನು ಕೊಡುತ್ತಿದ್ದಾರೆ. ಈಗ ಗುಲ್ಬರ್ಗಾದಲ್ಲಿರುವ ಮಿಲ್‌ಗಾಗಲಿ ಅಥವಾ ಎಲ್ಲಮ್ಮ ಟೆಕ್ಸ್‌ಟೈಲ್ ಮಿಲ್ ಇಂತಾಹದ್ದಕ್ಕೆ ಕೂಡ ಕೇಂದ್ರಸರ್ಕಾರ ಹಣವನ್ನು ಕೊಡಬೇಕೆಂದು ಇತ್ತು. ಅದಕ್ಕೆ ಪ್ರಯತ್ನವನ್ನು ನೀವು ಮಾಡಿದ್ದೀರಾ? ಕೇಂದ್ರ ಸರ್ಕಾರದಿಂದ ಹಣವನ್ನು ತರಿಸತಕ್ಕಂಥಾದ್ದು ಆಗಲಿ ಅಥವಾ ಇಂತಹ ರೋಗಗ್ರಸ್ತ ಕೈಗಾರಿಕೆಗಳನ್ನು ಕೇಂದ್ರಸರ್ಕಾರಕ್ಕೆ ಒಪ್ಪಿಸತಕ್ಕಂಥ ಪ್ರಯತ್ನ ಏನಾದರೂ ನಡೆದಿದೆಯೇ? ಅದು ಕೂಡ ನಡೆದಿಲ್ಲ. ಆದರೆ ನೀವು ಅಲ್ಲಿ ಕೊಡಬೇಕಾಗಿತ್ತು. ಏಕೆಂದರೆ ದಾವಣಗೆರೆ ಮುಖ್ಯಮಂತ್ರಿಯವರಿಗೆ ಬೇಕಾಗಿತ್ತು. ಅವರು ಕೊಡು ಎಂದು ಹೇಳಿದರು.

ಶ್ರೀ ಸಿದ್ದರಾಮಯ್ಯ : 1986-87ರಲ್ಲಿ ಸರ್ಕಾರ ಸ್ವಾಧೀನ ತೆಗೆದುಕೊಂಡಿರತಕ್ಕಂಥಾದ್ದಕ್ಕೆ, ಕಾಂಪೆನನೇಷನ್ ಕೊಟ್ಟಿರಲಿಲ್ಲ. ಐದು ವರ್ಷ ನೀವು ಕೂಡ ಸರ್ಕಾರ ಮಾಡಿದ್ದೀರಲ್ಲ. ಈಗ ಕಾಂಪೆನಸೇಷನ ಕೊಡುತ್ತಿರತಕ್ಕಂಥಾದ್ದು not that we have taken over that Mill.

SRI M. MALLIKARJUNA KHARGE : At that point only we tried, ಅದಕ್ಕೆ ಹೇಳುತ್ತಿದ್ದೇನೆ, ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್.

SRI SIDDARMAIAH : 8 years back it was taken over. We are paying compensation.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಸುಮ್ಮನೆ ಕಾಂಪನ್ಸೇಷನ್ ಕೊಟ್ಟು ಕೈಬಿಟ್ಟು ಪುನಃ ಓನರ್ ಸೈಟ್ ಮಾಡಿಕೊಂಡು ಕೋಟ್ಯಾಂತರ ರೂಪಾಯಿಗಳನ್ನು ತೆಗೆದುಕೊಳ್ಳುವುದಕ್ಕಿಂತಲೂ, ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್ ಅಸ್ತಿತ್ವದಲ್ಲಿ ಇದೆ. ಅದಕ್ಕೆ ವಹಿಸಿಕೊಡಿ .....

SRI SIDDARAMAIAH : At that time only we tried, ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್ ಅವರ ಜೊತೆಯಲ್ಲಿ ನಾವೆಲ್ಲಾ ಮಾತುಕತೆ ಆಡಿ ಚರ್ಚೆಯಾಗಿ, ಈ ಕೆ.ಆರ್. ಮಿಲ್. ಮೈಸೂರು ಅವರ ಜೊತೆಯಲ್ಲಿ ಸಹ ಮಾತನಾಡಿದೆವು. ಅವರು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಇದರ ಬಗ್ಗೆ 7-8 ವರ್ಷಗಳ ಹಿಂದೆ ಮಾತನಾಡಿ 4-5 ಬಾರಿ ಡೆಲ್ಲಿಗೆ ಅಲೆದು ಆಯಿತು. they were

not ready to take over this mill. ನೌಕರರು ಸಂಬಳ ಇಲ್ಲದೆ ಬೀದಿ ಪಾಲಾಗಿ ಮುಚ್ಚುವಂತಹ ಪರಿಸ್ಥಿತಿ ಬಂದಾಗ Government has taken over this mill. ಆಗ ಕಾಂಪನ್ಸೇಷನ್ ಕೊಟ್ಟಿರಲಿಲ್ಲ. ಈಗ ಕಾಂಪನ್ಸೇಷನ್ ಕೊಡುತ್ತಿದ್ದೇವೆ. ಇದು ಬಜೆಟ್‌ನಲ್ಲಿ ಪ್ರೊವೈಡ್ ಮಾಡಿಕೊಂಡಿಲ್ಲ. ಆದುದರಿಂದ ನಾಲ್ಕು ಕೋಟಿ, ನಲವತ್ತಾರು ಲಕ್ಷ ರೂಪಾಯಿ ಕೊಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಹೊಸ ಕಾರ್ಖಾನೆಗಳನ್ನು ತರುವುದಕ್ಕೆ ಚಾಸ್ತಿ ಮಾತನಾಡುತ್ತಿದ್ದೀರಿ. ಇದ್ದ ಕಾರ್ಖಾನೆಗಳನ್ನು ಉಳಿಸಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರದಲ್ಲಿ ಪ್ರಾವಿಜನ್ ಇದ್ದರೆ, ಪ್ರಯತ್ನ ಪಟ್ಟು ತರುವುದಕ್ಕೆ ಆಗಲಿಲ್ಲ. ಉಪಯೋಗ ಏನು?

ಶ್ರೀಸಿದ್ದರಾಮಯ್ಯ : ನೀವೇ ಐದು ವರ್ಷ ಇದ್ದೀರಲ್ಲ, ಏಕೆ ಪ್ರಯತ್ನ ಮಾಡಲಿಲ್ಲ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಪ್ರಯತ್ನ ಮಾಡಿ ಎಂ.ಎಸ್.ಕೆ. ಮಿಲ್ ಎಲ್ಲಾ ನಾವೇ ಮಾಡಿಸಿದ್ದು ಪ್ರಯತ್ನ ಮಾಡಿದೆವು, ಕೆ.ಆರ್. ಮಿಲ್ ಕೂಡ ಮಾಡಿಸುತ್ತಿದ್ದೆವು. ಎಲ್ಲಾದರೂ ಕೂಡ ಪ್ರಯತ್ನ ಮಾಡಬೇಕು. ಅದಕ್ಕೆ ಹೀಗೆ ದಾನ ಮಾಡುತ್ತೀರೇನು? ಎಲ್ಲಾದರೂ ಕೂಡ ಪ್ರಯತ್ನ ಮಾಡಬೇಕು. ಅದಕ್ಕೆ ಹೀಗೆ ದಾನ ಮಾಡುತ್ತೀರೇನು? ಇನ್ನೊಂದು ಡಿಮ್ಯಾಂಡ್ ನಂಬರ್ ಒಂಭತ್ತರಲ್ಲಿ ಐಟಂ ನಂಬರ್ ಮೂರರಲ್ಲಿ ಈಗಾಗಲೇ ಪ್ರಸ್ತಾಪ ಮಾಡಿದಹಾಗೆ ಆಳಂದ ಸಕ್ಕರೆ ಕಾರ್ಖಾನೆ, ಇದಕ್ಕೂ ಕೂಡ ತಾವು ಹಣ ಕೊಟ್ಟಿರಿ. ಈಗ ಕಬ್ಬಿನ ಬಾಕಿದಾರರು ಏನಿದ್ದರು ಅವರಿಗೆ ಹಣ ಕೊಡಬೇಕು ಎನ್ನುವ ದೃಷ್ಟಿಯಿಂದ 3-3 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದಿರಿ. ಇದೂ ಕೂಡ ಅದರಲ್ಲಿ ಬಂದಿದೆ. ಆದರೆ ಅಲ್ಲಿ ಒಂದು ಸಿ.ಓ.ಡಿ. ರಿಪೋರ್ಟ್ ರೆಡಿ ಇದೆ. ಏನು ತಪ್ಪಾಗಿದೆ ಎನ್ನುವುದನ್ನು ಬೀದರ್ ಹಳ್ಳಿಬೇಡ್, ಆಳಂದ್ ಸಕ್ಕರೆ ಕಾರ್ಖಾನೆ, ಇವುಗಳ ಮೇಲೆ ಎನ್‌ಕ್ವೈರಿಯಾಗಿ ಕೊಟ್ಟಿದ್ದಾರೆ. ಅದರಲ್ಲಿ ಇಂತಿಂತಹವರ ಮೇಲೆ ಆಕ್ಷನ್ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಅದಕ್ಕೋಸ್ಕರ ನೀವು ಒಬ್ಬಿಬ್ಬರು ಎಂ.ಡಿ. ಮೇಲೆ ಅಥವಾ ಅಲ್ಲಿರತಕ್ಕಂಥ ಅಧಿಕಾರಿಗಳ ಮೇಲೆ ಆಕ್ಷನ್ ತೆಗೆದುಕೊಂಡರೆ, ಮುಂದೆ ಅವರು ಈ ಒಂದು ತಪ್ಪನ್ನು ಮಾಡುವುದಕ್ಕೆ ಹೋಗುವುದಿಲ್ಲ. ಕೊನೇಪಕ್ಷ ನಮಗೆ ಕೇಳುವವರು ಇದ್ದಾರೆ, ಎಂದು ಚಿಂತನೆ ಮಾಡಿ ಹೆಜ್ಜೆ ಇಡುತ್ತಾರೆ. ಇಲ್ಲದಿದ್ದರೆ ಖಂಡಿತವಾಗಿ ನಾಳೆ ಇದರ ಬಗ್ಗೆ ಇದೇ ರೀತಿ ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡಿಕೊಂಡು ಹೋಗುತ್ತಾರೆ. ಅದರಲ್ಲೂ ವಿಶೇಷವಾಗಿ ಕೋ-ಆಪರೇಟಿವ್ ಇಲಾಖೆ ಬಗ್ಗೆ ಹೇಳುವುದಾದರೆ "ಹುಚ್ಚಿ ಮದುವೆಯಲ್ಲಿ ಉಂಡವನೇ ಜಾಣ" ಎನ್ನುವ ಹಾಗೆ ಯಾರ ಕೈಗೆ ಏನು ಸಿಗುತ್ತದೆಯೇ ಅದನ್ನು ತೆಗೆದುಕೊಂಡು ಓಡಿ ಹೋಗುತ್ತಾರೆ. ಈಗಾಗಲೇ ನಿಮ್ಮ ಬಿಜಾಪುರ ಫ್ಯಾಕ್ಟರಿಯಲ್ಲಿ ಇರತಕ್ಕ ಕಬ್ಬಿಣದ ಮೆಷಿನರಿಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಅದರಲ್ಲಿ ವಾಚಮೆನಗಳು ಸೇರಿಕೊಂಡಿದ್ದಾರೆಂದು ಕೇಳಿಬರುತ್ತಿದೆ.

ಉಪಾಧ್ಯಕ್ಷರು : ಮಾನ್ಯ ಸಹಕಾರ ಮಂತ್ರಿಗಳು ಏನೋ ಹೇಳುತ್ತಾರೆ.....

ಮಲ್ಲಿಕಾರ್ಜುನ ಖರ್ಗೆ : ನಾನು ಯೀಲ್ಡ್ ಆಗುವುದಿಲ್ಲ. ನನಗೆ ಸಹಾಯ ಕಡಿಮೆ ಇದೆ.

ಶ್ರೀ ಎಸ್.ಎಸ್. ಪಾಟೀಲ್ : ಸಿ.ಓ.ಡಿ. ರಿಪೋರ್ಟ್ ಬರುತ್ತದೆ, ಆಗ ನೋಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬರಲಿ, ನಮ್ಮ ಕಾಲದ್ದಾಗಲಿ, ನಿಮ್ಮ ಕಾಲದ್ದಾಗಲಿ ನೀವು ಹಿಂದೆ ಪಿ.ಎಲ್.ಡಿ. ಬ್ಯಾಂಕ್ ಚೇರಮನ್ ಇದ್ದಿರಾ. ಈ ರೀತಿಯಾಗಿ ಹೆದರಿಸಿದರೆ ಯಾರೂ ಹೆದರುವವರು ಇಲ್ಲ. ಯಾವ ಕಾಲದಲ್ಲಿ ಏನೆಲ್ಲ ಆಗಿದೆ ಎಂದು ನನಗೆ ಗೊತ್ತಿದೆ, ನೀವು ಏನು ತೊಂದರೆ ಕೊಡುವವರಿದ್ದೀರಿ, ಯಾವ ರೀತಿಯಾಗಿ ನೋಡಿಕೊಳ್ಳುವವರಿದ್ದೀರಿ ಅದನ್ನೆಲ್ಲಾ ತಿಳಿದುಕೊಂಡು ನಾನು ಹೆಜ್ಜೆ ಇಡುತ್ತಿದ್ದೇನೆ. ಅದನ್ನೆಲ್ಲಾ ಫೇಸ್ ಮಾಡುವುದಕ್ಕೆ ತಯಾರಾಗಿ ಈ ಜಾಗದಲ್ಲಿ ಕುಳಿತಿದ್ದೇನೆ. ಇಲ್ಲದಿದ್ದರೆ ನನಗೆ ಬೇಡ ಎಂದು ಹೋಗುತ್ತಿದ್ದೆ. ಅದರ ಮೇಲೆ ನೀವು ಹೆದರಿಸಿಬಿಟ್ಟರೆ ಹೆದರತಕ್ಕಂಥ ಮನುಷ್ಯ ನಾನಲ್ಲ. ಕೋ-ಆಪರೇಟಿವ್ ಇಲಾಖೆಯಲ್ಲೂ ಕೂಡ ಅನೇಕ ರೋಗಗ್ರಸ್ತ ಕಾರ್ಖಾನೆಗಳು ಇದ್ದರೂ ಕೂಡ ಕ್ರಮವನ್ನು ಒಂದು ಕಡೆ ತೆಗೆದುಕೊಂಡಿಲ್ಲ. ಅದರ ಆಸ್ತಿಪಾಸ್ತಿಗಳನ್ನು ಜೋಪಾನ ಮಾಡುವಂತಹ ಕೆಲಸ ಕೂಡ ನಮ್ಮ ಕರ್ತವ್ಯವಾಗಿದೆ. ಬಿಜಾಪುರದಲ್ಲಿ ಮೆಷಿನರಿಗಳನ್ನು ಕೂಡ ರಾತ್ರೋರಾತ್ರಿ ತೆಗೆದುಕೊಂಡು ಹೋಗುತ್ತಿದ್ದಾರೆ. ಅಲ್ಲಿ ಇರತಕ್ಕಂಥ ಸೆಕ್ಯೂರಿಟಿಗಳೇ ಕಲ್ಯೂಡ್ ಆಗಿದ್ದಾರೆ. ಅದರ ಬಗ್ಗೆ ಬಂದು ನಿಮ್ಮಲ್ಲಿ ಕೂಡ ಅಪ್ಲಿಕೇಷನ್ ಕೊಟ್ಟಿದ್ದಾರೆ. ಎಲ್ಲಾ ಜನರನ್ನು ಕೂಡ ಛೀಟಿ ಆಗಿದ್ದಾರೆ. ಹೀಗೆ ಎಲ್ಲಾ ಮಾಡಿಕೊಳ್ಳುತ್ತಾ ಹೋದರೆ ರಾಯಚೂರು ಟೆಕ್ಸಟೈಲ್ ಮಿಲ್ ಇರಬಹುದು, ಬಿಜಾಪುರ ಮಿಲ್ ಇರಬಹುದು, ಸಕ್ಕರೆ ಕಾರ್ಖಾನೆ ಇರಬಹುದು, ಅವುಗಳನ್ನು ಪರಿಸ್ಥಿತಿ ಬೇಲಿನ ಎದ್ದು ಹೊಲ ಮೇಯ್ದ ಹಾಗೆ ಆಗುತ್ತದೆ. ಈ ರೀತಿಯಾದರೆ ನಾವು ಯಾರಿಗೆ ಹೇಳಬೇಕು? ಅದಕ್ಕೆ ನಮ್ಮ ಸರ್ಕಾರ ಮಾಡಿದೆ. ನಿಮ್ಮ ಸರ್ಕಾರ ಮಾಡಿದೆ ಎಂದು ಗೂಬೇ ಕೂರಿಸುವುದಲ್ಲ. ನಿಮ್ಮ ಕೈಗೆ ಸಿಕ್ಕಮೇಲೆ ಅದು ಎಷ್ಟರಮಟ್ಟಿಗೆ ಪರಿಹಾರ ಸಿಕ್ಕಿದೆ, ಎಷ್ಟರಮಟ್ಟಿಗೆ ಕ್ರಮವನ್ನು ಜರುಗಿಸಿದ್ದೀರಿ ಎನ್ನುವುದು ಬಹಳ ಮುಖ್ಯನೇ ಹೊರತಾಗಿ ನೀವು ಬರೀ ಹಿಂದಿನ ಕಥೆಯನ್ನು ಹೇಳಿಕೊಂಡು ಕಾಲ ಕಳೆಯುತ್ತೇವೆ ಎಂದರೆ ಇಲ್ಲಿ ನಾವು ಹರಿಕಥೆ ಕೇಳುವುದಕ್ಕೆ ಬಂದಿಲ್ಲ. ಎರಡನೆಯದು ಏನು ಅಂದರೆ ನಿಮ್ಮ ಡಿಮ್ಯಾಂಡ್ ನಂಬರ್ 12. ಇದರಲ್ಲಿ ಮಾಡರನೈಸೇಷನ ಆಫ ಸ್ಪೇಡಿಯಂ ಬಗ್ಗೆ ಹೇಳಿದ್ದೀರಿ. ಮತ್ತು ನ್ಯಾಷನಲ್ ಗೇಮ್ಸ್. ಇದರ ಬಗ್ಗೆ ನಾನು ಲೋಕಾಯುಕ್ತಕ್ಕೆ ರೆಫರ್ ಮಾಡುವುದಕ್ಕೆ ಹೇಳಿದ್ದೇನೆ. ಇದರಲ್ಲಿ ಸುಮಾರು ತಾವು 12½ ಕೋಟಿ ರೂಪಾಯಿ ಹೆಚ್ಚಿಗೆ ಹಣವನ್ನು ಕೇಳಿದ್ದೀರಿ.

ಶ್ರೀ ಸಿದ್ಧರಾಮಯ್ಯ : ಇದರಲ್ಲಿ ಕೇಂದ್ರ ಸರ್ಕಾರದಿಂದ ಬಂದಿರುವುದು ಇದೆ. ಅದರಲ್ಲಿ ಐದು ಕೋಟಿ ರೂಪಾಯಿ ನಾರು ಕೊಟ್ಟಿರುವುದು. ಎಂಟು ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬಂದಿರುವುದನ್ನು ಬಿಡುಗಡೆ ಮಾಡಿದ್ದೇವೆ. ಅದಕ್ಕೋಸ್ಕರ ಇದನ್ನು ತಂದಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮಗೆ ಗೊತ್ತಿದ್ದ ಹಾಗೆ ಅದರ ಒರಿಜಿನಲ್ ಎಸ್ಟಿಮೇಟ್ ಇರತಕ್ಕದ್ದು 60 ಕೋಟಿ ರೂಪಾಯಿ. ಅದಕ್ಕಾಗಿ ಅವರಿಗೆ 42 ಕೋಟಿ ರೂಪಾಯಿ ಎಕ್ಸಸ ಆಗಿದೆ. ಹೀಗಾಗಿ ಇವತ್ತಿನ ದಿವಸ 100 ಕೋಟಿ ರೂಪಾಯಿಗಳವರೆಗೆ ಬರಬೇಕಾದರೆ ಕಾರಣ ಏನು? ಅದಕ್ಕೇ ನಾವು ಲೋಕಾಯುಕ್ತಕ್ಕೆ ರೆಫರ್ ಮಾಡಿ ಎಂದು ಡಿಮ್ಯಾಂಡ್ ಮಾಡಿದ್ದುದು. ಏಕೆಂದರೆ ಇವತ್ತು ನಾನು

ನೋಡಿದೆ. ಏನು ಬಹಳ ಆಸಕ್ತಿ ವಹಿಸಿ, ಈ ಸದನದಲ್ಲಿ ಎಸ್ಟಿಮೇಟ್ ಕಮಿಟಿ ರಿಪೋರ್ಟನ್ನು 1992-93, 1993-94 ರಲ್ಲಿ ಒಂದು ಕೋಟಿ ರೂಪಾಯಿ, ಎರಡು ಕೋಟಿ ರೂಪಾಯಿ ಅವ್ಯವಹಾರ ಆಗಿದೆ, ಇದನ್ನು ಸಿಬಿಐಗೆ ಕಳಿಸಬೇಕು. ಅಂದರೆ ಈ ಸರ್ಕಾರ ಸಮರ್ಥ ಇದೆ. ಈ ಸರ್ಕಾರದ ಕೈಯಲ್ಲಿ ಆಗುವುದಿಲ್ಲ. ಆ ಒಂದು ರಿಪೋರ್ಟ್ ಇಂಪ್ಲಿಮೆಂಟ್ ಮಾಡುವುದಕ್ಕೆ ಸಿಬಿಐ ವಿಚಾರಣೆ ಆಗಬೇಕು ಎಂದು ಹೇಳಿದಿರಿ. ಬಹಳ ಸ್ವಾಗತ ಮಾಡಿದೆವು ಮತ್ತು ಕೆಲವು ಜನ ಚಪ್ಪಾಳೆ ಬಾರಿಸಿದರು. ನಾನು ನೋಡಿದೆ, ನಾನು ಆಗ ತಾನೇ ಪ್ರವೇಶ ಮಾಡುತ್ತಿದ್ದೆ. ಪೂರ್ತಿ ನಾನು ಕೇಳಲಿಲ್ಲ. ಯಾವಾಗ ನೀವು ಅದಕ್ಕೆ ರೆಡಿ ಇದ್ದಿರಿ ಅಂದರೆ 100 ಕೋಟಿ ರೂಪಾಯಿಗಳಲ್ಲಿ ಸುಮಾರು 20-30 ಕೋಟಿ ರೂಪಾಯಿ ಅವ್ಯವಹಾರ ಇದೆ. ನಿಮ್ಮಲ್ಲಿ ಇದೆಯಲ್ಲಾ ದಾಖಲೆಗಳು, ನೀವೇ ಎಸ್ಟಿಮೇಟ್ ಮಾಡಿ ಕೊಟ್ಟಂತಹದು. ಸುಮಾರು 25-30 ಪರ್ಸೆಂಟ್ ಎಕ್ಸಸ್ ಪೇಮೆಂಟ್ ಆಗಿದೆ.

ಉಪಾಧ್ಯಕ್ಷರು : ಸಂಬಂಧಪಟ್ಟ ಮಂತ್ರಿಯವರು ಏನೋ ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಹೇಳುವಾಗ ನಾನು ಡಿಸ್ಟರ್ಬ್ ಮಾಡಿಲ್ಲ. ನಾನು ಹೇಳುವಾಗ ಏಕೆ ಮಾಡಬೇಕು? ಇಲ್ಲಿ ಡಿಮ್ಯಾಂಡ್ ಇದೆ, ಆ ಡಿಮ್ಯಾಂಡ್ ಮೇಲೆ ನಾವು ಮಾತನಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಈ ವಿಷಯ ಚರ್ಚೆ ಆಗಿದೆ. ಇದಕ್ಕೆ ಸಮಂಜಸವಾದ ಉತ್ತರ ಕೂಡ ಕೊಡಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಚರ್ಚೆ ಆದರೂ ಸಹ.

ಶ್ರೀ ಸಿದ್ದರಾಮಯ್ಯ : ಎಲ್ಲ ಚರ್ಚೆ ನಡೆದಿದೆ. ಏನೋ ಆಗಿ ಹೋಗಿ ಬಿಟ್ಟಿದೆ, ಸಿಬಿಐ ತನಿಖೆಗೆ ರೆಫರ್ ಮಾಡಿ ಎಂದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಳುಗಿ ಹೋಗಿದೆ ಎಂದು ಏಕೆ ಹೇಳುತ್ತೇನೆ ಎಂದರೆ 25 ಪರ್ಸೆಂಟ್ ಎಕ್ಸಸ ತೆಗೆದುಕೊಂಡು, 36 ವೀಕನಲ್ಲಿ ಕಂಪ್ಲೀಟ್ ಮಾಡುತ್ತೇವೆಂದು ಹೇಳಿಕೊಂಡು ಈ ಸದನದ ಅಪ್ರೂವಲ್ ತೆಗೆದುಕೊಂಡಿದ್ದೀರಿ. ಇವತ್ತಿನ ದಿವಸ ಪುನಃ ಒಂದು ವರ್ಷ ಜಾಸ್ತಿ ಆಯಿತು. ಅದಕ್ಕೆ 40 ಕೋಟಿ ರೂಪಾಯಿ ಜಾಸ್ತಿ ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ : ಎಸ್ಕಲೇಷನ್ ಆಗಿ ರಿವೈಸ್ ಎಸ್ಟಿಮೇಷನ್ ಆಗಿದೆ. ಅದು ಅಪ್ರೂವ್ ಆಗಿರತಕ್ಕದ್ದು ಬೇಕಾದಷ್ಟು ಇದೆ. ಇಂಥದ್ದು ಬೇಕಾದಷ್ಟು ನಡೆದಿವೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮಗೆ ಬೇಕಾಗಿದ್ದು ಸಿಬಿಐ ವಿಚಾರಣೆ. ಇವತ್ತು ನಾವು ಡಿಮ್ಯಾಂಡ್ ಮಾಡಿದರೆ ಏಕೆ ಮಾಡುವುದಿಲ್ಲ? ರೆಫರ್ ಮಾಡಿ. ನಿಮಗೆ ಯಾವುದು ಬೇಕೋ ಅದನ್ನು ಆಕ್ಚುಯಲ್ ಆಗಿ ಮಾಡುವುದಕ್ಕೆ ಹೋಗುತ್ತೀರಿ. ಒಬ್ಬರ ಮೇಲೆ ಗೂಬೆ ಕೂರಿಸುವುದಕ್ಕೋಸ್ಕರ ನೀವು ಅದನ್ನು ಮಾಡಬಹುದು. ಇದಕ್ಕೆ ರೆಫರ್ ಮಾಡಬಾರದು?

ಉಪಾಧ್ಯಕ್ಷರು : ಸ್ಪೋರ್ಟ್ಸ್ ಮಿನಿಸ್ಟರ್ ಅವರು ಏನೋ ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಡಿಮ್ಯಾಂಡ್ ಬಂದಿದೆ. ಡಿಮ್ಯಾಂಡ್ ನಂಬರ್ 9 ಇದೆ.

ಶ್ರೀ ಜೆ.ಪಿ. ಶಿವಕುಮಾರು : ನಾನು ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪ ಮಾಡಿದ್ದೆ. ಈಗ ಸುತ್ತಿ ಬಳಸಿ ಮಾತನಾಡುತ್ತಿದ್ದಾರೆ.

ಶ್ರೀ ಅಜಯ್ ಕುಮಾರ್ ಸರನಾಯಕ : ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಒಂದು ಮಾತು ಹೇಳುತ್ತೇನೆ.

ಉಪಾಧ್ಯಕ್ಷರು : ಸ್ಪೋರ್ಟ್ಸ್ ಮಿನಿಸ್ಟರು ಅವರು ಏನೋ ಹೇಳುತ್ತಾರೆ. ಒಂದೆರಡು ನಿಮಿಷ ತಡೆಯಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನಗೆ ಸಮಯ ಇಲ್ಲ ಎಂದು ಹೇಳುತ್ತೀರಿ. ಅದಕ್ಕಾಗಿ ನಾನು ನಾಳೆ ತೆಗೆದುಕೊಳ್ಳಿ ಎಂದು ಹೇಳಿದೆ. ಅದಕ್ಕಾಗಿ ನೀವು ನಾಳೆ ಚರ್ಚೆಗೆ ತೆಗೆದುಕೊಳ್ಳಿ, ನಾನು ಇನ್ನೂ ಹೇಳುವುದು ಇದೆ. ಸ್ಪೆಷಲ್ ಕಾಂಪೊನೆಂಟ್ ಇದೆ. ಇನ್ನೂ ಬೇರೆ ವಿಚಾರಗಳು ಇವೆ.

ಉಪಾಧ್ಯಕ್ಷರು : ತಾವು ಬೇಕಾದರೆ ಇದನ್ನು ಒಂದು ತಾಸು ತೆಗೆದುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಇನ್ನು ಕೆಲವು ವಿಚಾರಗಳನ್ನು ಹೇಳಬೇಕು. ನನಗೆ ಅವಕಾಶ ಮಾಡಿಕೊಡಿ. ಅದೂ ಇಲ್ಲ ಇದೂ ಇಲ್ಲ ಎಂದರೆ ಹೇಗೆ?

ಉಪಾಧ್ಯಕ್ಷರು : ಅವರು ಎದ್ದು ನಿಂತಿದ್ದಾರೆ. ಏನೋ ವಿಚಾರ ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಯೀಲ್ಡ ಆಗಿಲ್ಲ.

ಶ್ರೀ ಅಜಯ್ ಕುಮಾರು ಸರನಾಯಕ್ : ಈಗೇನು ರಾಷ್ಟ್ರೀಯ ಕ್ರೀಡೆ ವಿಚಾರದ ಬಗ್ಗೆ ಹೇಳಿದಿರಿ. 25ರಿಂದ 30 ಕೋಟಿ ರೂಪಾಯಿ ಎಸ್ಟಿಮೇಟ್ ಇತ್ತು. ಅದು ನೂರು ಕೋಟಿ ರೂಪಾಯಿ ಆಗಿದೆ. ಈಗ 45 ಕೋಟಿ ರೂಪಾಯಿ ಅವ್ಯವಹಾರ ಆಗಿದೆ ಎಂದು ತಾವು ಹೇಳಿದಿರಿ. ನಾವು ಸ್ಪೇಡಿಯಂಗೆ [illegible] ಕರೆದಿದ್ದೇವೆ. ಆ ವರ್ಕಗಳ ಮೇಲೆ ನಾವು ಹೆಚ್ಚಿಗೆ ಕೊಟ್ಟಿಲ್ಲ. ನಾವು ಹೆಚ್ಚಿಗೆ ಹಣ ಕೊಟ್ಟಿದ್ದು ಏಕೆ ಅಂದರೆ ಅಲ್ಲಿ ಸ್ಕೋಪ್ ಆಫ್ ವರ್ಕ್ ಜಾಸ್ತಿ ಆಗಿದೆ. ಯಾವ ಐಟಂಗಳು ಟೆಂಡರ್‌ನಲ್ಲಿ ಇರಲಿಲ್ಲ ಅದು ಜಾಸ್ತಿ ಆಗಿದೆ. ಉದಾಹರಣೆಗೆ ಈಗ ಕಂಠೀರವ ಕ್ರೀಡಾಂಗಣ. ಅಲ್ಲಿ ನಾವು ಫ್ಲಡ್ ಲೈಟಿಂಗ್‌ಗೆ ವ್ಯವಸ್ಥೆ ಮಾಡಿದ್ದೇವೆ. ಅದು ಮೊದಲು ಟೆಂಡರ್‌ನಲ್ಲಿ ಇರಲಿಲ್ಲ. ಅಲ್ಲಿ ಮೂರೂವರೆಯಿಂದ ನಾಲ್ಕು ಕೋಟಿ ರೂಪಾಯಿ ಫ್ಲಡ್ ಲೈಟಿಂಗ್‌ಗೆ ಕೊಟ್ಟಿದ್ದೇವೆ. ಹೀಗಾಗಿ ಅಲ್ಲೇನು ಸ್ಕೋಪ್ ಆಫ್ ವರ್ಕ್ ಜಾಸ್ತಿ ಆಗಿದೆ, ಅದಕ್ಕಾಗಿ ಹೆಚ್ಚಿಗೆ ಹಣವನ್ನು ಕೊಟ್ಟಿದ್ದೇವೆಯೇ ಪರಂತು ನಾವೇನು ಟೆಂಡರ್ ಕರೆದಿದ್ದೇವಲ್ಲ. ಆ ಕೆಲಸಗಳಿಗೆ ಏನೂ ಹೆಚ್ಚಿಗೆ ಹಣ ಕೊಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನನ್ನ ಮುಂದೆ ಎಕ್ಸ್‌ಪ್ಲನೇಟರಿ ನೋಟ್ ಇದೆ. ``The Government of India, Ministry of Human Resources Development had released a sum of Rs.8 crores to the State as grant for creation of new sports infrastructure and modernisation of existing infrastructure in Bangalore and Mysore for holding national games. This amount has been released to Sports Authoritiy of Karnataka for this purpose. Further, a sum of Rs. 2.5 crores has also been released out of Rs.5 crores required for the construction of the stadium to provide infrastructure facilities and to complete the work relating to National Games since the provision is made in the Budget for this purpose is insufficient. The required amount of Rs. 13 crores is included in the Demand"

ಅಂದರೆ ಮೊದಲು ನೀವು ಕೊಟ್ಟಂತಹ ಹಣ ಕಡಿಮೆ ಇತ್ತು. ಅದಕ್ಕಾಗಿ ಇದನ್ನು ಮಾಡಿದ್ದೇವೆ ಎಂದು ತಾವು ಹೇಳಿದ ಮೇಲೆ ಈ ಡಿಮ್ಯಾಂಡ್ ಬಂದ ಮೇಲೆ ನಾನು ಹೇಳಬೇಕೋ ಇಲ್ಲವೋ? ಈ ಡಿಮ್ಯಾಂಡ್ ಏಕೆ ಬಂತು ಎನ್ನುವುದಕ್ಕೆ ಈಗ ಅವರು ಕಾರಣ ಹೇಳಿದರು. ಫ್ಲಡ್ ಲೈಟ್ ಹೆಚ್ಚಿಗೆ ಮಾಡಿದ್ದೇವೆ. ಅದರ ಗಾತ್ರ ಹೆಚ್ಚಿಗೆ ಮಾಡಿದ್ದೇವೆ, ನಾವು ಎಸ್ಟಿಮೇಟ್ ಮಾಡಿದ್ದೇವೆ ಎಂದರು. ಇದೂ ಒಂದು ರೀತಿಯಲ್ಲಿ ಸಹಾಯ ಮಾಡತಕ್ಕದ್ದು. ಕೆಲವು ಸಲ ಏನು ಮಾಡುತ್ತಾರೆ ಎಂದರೆ ಲೋಕೋಪಯೋಗಿ ಇಲಾಖೆಗಳಲ್ಲಿ, ಎಲ್ಲರಿಗೂ, ಮಂತ್ರಿಗಳಿಗೂ ಇದು ಗೊತ್ತಿರಬಹುದು. ಏಕೆಂದರೆ ಎಸ್ಟಿಮೇಟ್ ಕಮಿಟಿಯಲ್ಲಿ ಅಭ್ಯಾಸ ಮಾಡುವಾಗ ಏನು ಮಾಡುತ್ತಾರೆ? ಇಂತಹ ಕೆಲಸ ಕೊಡಿಸುತ್ತೇವೆಂದು ಹೇಳಿ ಬರುತ್ತಾರೆ. ಆ ಕೆಲಸದಲ್ಲಿ ಅವರಿಗೆ ಅನುಕೂಲ ಇತ್ತು ಎಂದರೆ, ಇದು ಲುಕ್ಸಾನು, ಇರತಕ್ಕ ಕೆಲಸವನ್ನೂ ಅದರ ಜೊತೆಯಲ್ಲಿ ಮಾಡು ಎಂದು ಹೇಳಿ ಬಿಡುತ್ತಾರೆ. ಇದು ಅನೇಕ ಸಾರಿ ಎಸ್ಟಿಮೇಟ್ ಕಮಿಟಿಯಲ್ಲಿ ಬಂದಂತಹದು ಇದೆ. ತಾವು ರೆಕ್ಟಿಫೈ ಮಾಡಿದ್ದೂ ಇದೆ. ಮತ್ತು ಅನೇಕ ಸದಸ್ಯರ ಗಮನಕ್ಕೆ ಬಂದು ನೀವು ರಿವ್ಯೂ ಮಾಡುತ್ತೀರಿ. ಹೀಗಿರುವಾಗ, ನಾನು ಅದಕ್ಕೇ ಕೇಳುತ್ತಿದ್ದೇನೆ ನೀವು ಇಲ್ಲ ಎಂದು ವಾದ ಮಾಡುತ್ತಿದ್ದೀರಿ. ಅಥವಾ ಹೆಚ್ಚಿನ ಕೆಲಸ ಮಾಡಿದೆಯೋ ಎಕ್ಸ್‌ಪಾಂಡ್ ಮಾಡಿದೆಯೋ ಅದಕ್ಕಾಗಿ ಈ ಎಕ್ಸ್‌ಸ್ ಅಮೌಂಟ್ ಬಂತು ಎಂದು ತಾವು ಹೇಳಿದಿರಿ. ಅದಕ್ಕಾಗಿ ಎಕ್ಸ್‌ಸ್ ಅಮೌಂಟ್ ಬಂತಲ್ಲ. ನಾನು ಕೇಳುತ್ತಿದ್ದೇನೆ 60 ಕೋಟಿ ರೂಪಾಯಿ ಕೇಳತಕ್ಕದ್ದೂ ನಿಜ. ಅಂದರೆ 42 ಕೋಟಿ ರೂಪಾಯಿ ಎಕ್ಸ್‌ಸ್ ಆಗ ಬೇಕು ಎಂದಾಗ, ನಾನು ಇದರಲ್ಲಿ ಇಷ್ಟೊಂದು ವ್ಯತ್ಯಾಸ, 40 ಪರ್ಸೆಂಟ್ ವ್ಯತ್ಯಾಸ ಆಗಿದೆ ಎಂದು ಹೇಳಿದರೆ ತಪ್ಪೇನು ಇದೆ? ಇದರಲ್ಲಿ ಏನು ತಪ್ಪು ಇದೆ? ಅದಕ್ಕೆ ನೀವು ಎನಕ್ಟೈರಿ ಮಾಡಿಸಿ ಎಂದರೆ, ಇಲ್ಲ. ನಾಳೆ ಹಾಗೆಯೇ ಬರಲಿ. ನೀವು ಹೇಳಿದ್ದೇ ಸರಿ ಎಂದು ಬಂದರೆ ಸರಿ ನೋಡೋಣ. ಅದಕ್ಕೆ ನೀವು ವಿಚಾರಣೆಗೆ ತಯಾರಿಲ್ಲ. ಆದರೆ 40 ಕೋಟಿ ರೂಪಾಯಿ ಹಾಗೆಯೇ ಕಣ್ಣು ಮುಚ್ಚಿ ಕೊಡುವುದಕ್ಕೆ ಆಗುತ್ತದೆಯೇ? ಅದಕ್ಕೆ ಇನ್ನೂ ಕೂಡ ನಾನು ಡಿಮ್ಯಾಂಡ್ ಮಾಡುತ್ತೇನೆ. ಸಪ್ಲಿಮೆಂಟರಿ ಅಜೆಂಡಾದಲ್ಲೂ ಕೂಡ ಬಂದಿದೆ, ಎಸ್ಟಿಮೇಟನಲ್ಲಿ ಕೂಡ ಬಂದಿದೆ. ಮಾನ್ಯ ಉಪ ಮುಖ್ಯಮಂತ್ರಿಗಳ ನೇರವಾಗಿ ಬೇಕಾದರೆ ಲೋಕಯುಕ್ತಕ್ಕೆ ರೆಫರ್ ಮಾಡಲಿ. ಕೆಲಸದ ಬಗ್ಗೆ ನಾನೇನು ಸ್ಟೇ ಮಾಡಿ ಎಂದು

ಹೇಳುವುದಿಲ್ಲ. ಆದರೆ ಇದರ ಬಗ್ಗೆ ಡೀಟೇಲ್ ಆಗಿ ಅಭ್ಯಾಸ ಮಾಡಿ. ಏಕೆಂದರೆ ನಮ್ಮ ಸದನದ ಸಮಿತಿ ಕೂಡ ಇದರ ಬಗ್ಗೆ ಒಂದು ವರದಿ ಕೊಟ್ಟಿದೆ. ಅದಕ್ಕಾಗಿ ನೀವು ನೇರವಾಗಿ ಲೋಕಾಯುಕ್ತಕ್ಕೆ ರೆಫರ್ ಮಾಡಿ. ಏಕೆಂದರೆ ಬಹಳ ಬಿಚ್ಚು ಮನಸ್ಸಿನವರು, ಟ್ರಾನ್ಸ್‌ಫರೆನ್ಸಿ ಎಂದು ಏನೋ ಹೇಳುತ್ತಾರಲ್ಲ, ಅಂಥ ಸರ್ಕಾರ ನಿಮ್ಮದು ಇದೆ. ತಕ್ಷಣ ಯಾರಾದರೂ ಎದ್ದುಕೂಡಲೇ ಇನ್ನೊಬ್ಬರು ಏಳುತ್ತಾರೆ. ಅದಕ್ಕೆ ಬೇಕಾದರೆ ನಿಮಗೆ ಉತ್ತರ ಕೊಡುತ್ತೇನೆ. ದಯವಿಟ್ಟು ಇದಕ್ಕೆ ಕೂಡ ಉತ್ತರವನ್ನು ಕೊಟ್ಟು, ಲೋಕಾಯುಕ್ತಕ್ಕೆ ರೆಫರ್ ಮಾಡಿ ಬಿಡಿ. ರೆಫರ್ ಮಾಡಲಿಲ್ಲ ಎಂದರೆ ನಾನೇನು ತಿಳಿದುಕೊಳ್ಳುತ್ತೇನೆ, ನಿಮ್ಮ ಹತ್ತಿರ ಧೈರ್ಯ ಇಲ್ಲ. ನೀವು ಹಿಂದೇಟು ಹಾಕುತ್ತಿದ್ದೀರಿ. ಇದರ ಹಿನ್ನೆಲೆ ಏನು ಇದೆ ಎನ್ನತಕ್ಕ ಊಹೆಯನ್ನು ಸಸ್ಪಿಷನ್ ಮಾಡತಕ್ಕದ್ದಕ್ಕೆ ನೀವೇ ಆಸ್ಪದ ಕೊಡುತ್ತಿದ್ದೀರಿ. ಈ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಇದು ಡಿಮ್ಯಾಂಡ್ ನಂಬರ್ 12. ಆಮೇಲೆ ಇನ್ನೂ ಸಾಕಷ್ಟು ವಿಷಯಗಳು ಇವೆ. ಆದರೆ ಇವರು ಕೊನೆಯ ಘಳಿಗೆಯಲ್ಲಿ ತಂದಿದ್ದಾರೆ. ನಾವು ಇದನ್ನು ಓದಿಕೊಂಡು ಏನೋ ಹೇಳೋಣ ಎಂದರೆ ಇದು ಆಗುವುದಿಲ್ಲ.

ಶ್ರೀ ಎಂ. ಸಿ. ನಾಣಯ್ಯ : ಪೂರಕ ಅಂದಾಜುಗಳು ಇದೇ ಮೊದಲನೆ ಬಾರಿಗಾ ಸದನದಲ್ಲಿ ಬರುವುದು? ಮೊದಲನೆ ಬಾರಿಗೆ ಬರುವುದು ಇದ್ದರೆ, ಬಹುಶಃ ಇವರು ಮಾಡುತ್ತಿರತಕ್ಕ ಎಲ್ಲಾ ವಿಚಾರಗಳನ್ನು ನಾನು ಒಪ್ಪಿಕೊಳ್ಳುತ್ತಿದ್ದೆ. ಇವರೂ ಮಂತ್ರಿಗಳು ಆಗಿದ್ದವರು. ಇವರು ಮಂತ್ರಿಗಳಾಗಿದ್ದಾಗ ನಿಮ್ಮ ಸರ್ಕಾರದಲ್ಲಿ ವರ್ಷಕ್ಕೆ ಎರಡು ಸಲ ಮೂರು ಸಲ ಬರುತ್ತಿತ್ತು.

ಉಪಾಧ್ಯಕ್ಷರು : ರೂಲಿಂಗ್ ಕೊಟ್ಟಾಗಿದೆ.

ಶ್ರೀ ಎಂ. ಸಿ. ನಾಣಯ್ಯ : ನಾನು ಅದನ್ನೇ ಹೇಳುತ್ತಿದ್ದೇನೆ. ಮಾನ್ಯ ಖರ್ಗೆಯವರೆ, ಬಹುಶಃ ಸರ್ಕಾರ ತೆಗೆದುಕೊಂಡಿರತಕ್ಕ ತೀರ್ಮಾನ ನಿಜವಾಗಿ ತೆಗೆದುಕೊಳ್ಳಬೇಕಾಗಿರಲಿಲ್ಲ; ಅಂತಹ ಒಂದು ಹಣವನ್ನು ನೀವ್ಯಾಕೆ ಖರ್ಚು ಮಾಡಿದ್ದೀರಿ ಎಂದು ಹೇಳುತ್ತಿರತಕ್ಕ ವಿಚಾರವನ್ನು ನಾವು ಒಪ್ಪಿಕೊಳ್ಳಬಹುದು. ಆದರೆ, ಎಲ್ಲಾ ಬಾಬುಗಳನ್ನು ನೋಡಿದಾಗ, ಕೆಲವು ಸಂದರ್ಭದಲ್ಲಿ ಅದನ್ನು ಮಾಡಲೇ ಬೇಕಾಗಿರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಹದೇವ ಟೆಕ್ಸ್‌ಟೈಲ್ ಮಿಲಗೆ ಕೊಟ್ಟಿದ್ದೀರಿ.

ಶ್ರೀ ಎಂ. ಸಿ. ನಾಣಯ್ಯ : ಮಹದೇವ ಟೆಕ್ಸ್‌ಟೈಲ್‌ನಲ್ಲಿ ಲಿಕ್ವಿಡೇಷನ್ ಆಗಿ, ಹೈಕೋರ್ಟ್ ಆಜ್ಞೆ ಪ್ರಕಾರ ಕೊಟ್ಟಿರತಕ್ಕಂಥದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಐಟಂ ನಂ (2) ಡಿಮಾಂಡ್ ನಂ. (14) - ಸ್ವಲ್ಪ ಕೇಳಿ. ಕೆಎಂಎಫ್‌ಗೆ.

ಶ್ರೀ ಸಿದ್ದರಾಮಯ್ಯ : ಏನೋ ಭಾರಿ ಪ್ರಚಾರ ಮಾಡಿಕೊಳ್ಳುವುದಕ್ಕೆ ಕೆಎಂ.ಎಫ್‌ನಿಂದ ಕೊಡಿಸಿದಿರಿ. ನಿಮ್ಮ ಸರ್ಕಾರದ ಕಾರ್ಯಕ್ರಮ ಇದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೆ.ಎಂ.ಎಫ್ ಅಧ್ಯಕ್ಷರಾಗಿ ಇವತ್ತು ವಸತಿ ಸಚಿವರಲ್ಲದೆ ಇನ್ನೊಬ್ಬರು ಯಾರಾದರೂ ಇದ್ದರೆ, ಈ 10 ಕೋಟಿ ರೂ. ಬಿಡುಗಡೆಯಾಗುತ್ತಿರಲಿಲ್ಲ.

``ITEM No.2: A sum of Rs. 51.692.00 is required to settle the areares claims by KMF for having supplied milk to school going children during 93-95 under Ksheera Programme. Since no provision has been made in the budget for the purpose, and the entire amount could be found by reappropriattion of savings only a token sum of Rs. 1000.00 is included in the Demand". ಹೌದಾ? ನಾನು ಏನು ಹೇಳುತ್ತಿದ್ದೇನೆಂದರೆ ಈ 51 ಲಕ್ಷ ಕೂಡ ಬೇರೆಯವರು ಅಧ್ಯಕ್ಷರಾಗಿದ್ದಿದ್ದರೆ ಕೊಡುತ್ತಿರಲಿಲ್ಲ.

(ಗೊಂದಲ)

ಇನ್ನು ಕೊಳಚೆ ನಿರ್ಮೂಲನ ಮಂಡಲಿಗೂ ಕೊಟ್ಟಿದ್ದೀರಿ, ಖರ್ಚಾಗುತ್ತಿರುವ ಹಣಕ್ಕೆ ನೀವು ವ್ಯವಸ್ಥಿತವಾಗಿ ಏನಾದರೂ ಮಾಡದೇ ಹೋದರೆ, ಬರೀ ಭಾಷಣದಲ್ಲಿ ಕಾರ್ಯಕ್ರಮ ಉಳಿಯುತ್ತದೆಯೇ ಹೊರತಾಗಿ ಸಾಧನೆಯಾಗುವುದಿಲ್ಲ. ಇನ್ನು ಎರಡು ತಿಂಗಳೇ ಉಳಿದಿದೆ ಆದರೆ ಇನ್ನೂ ಕೇಂದ್ರ ಸರ್ಕಾರದಿಂದ ಬಂದಂತಹ ಹಣವನ್ನೂ ಖರ್ಚುಮಾಡಿಲ್ಲ. ರಾಜ್ಯದ್ದೂ ಖರ್ಚುಮಾಡಲು ಆಗಿಲ್ಲ. ಯಾವಾಗ ಕೇಳಿದರೂ, ಇರುವುದು ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರಗೆ ಒಂದು ಜಿಲ್ಲೆಗೆ, ಆತನೂ ಸಿಟಿಯಲ್ಲಿರುತ್ತಾನೆ ಉಳಿದ ಎಲ್ಲಾ ಟೌನಗೆ ಹೋಗಬೇಕು ಸರ್ವೆ ಮಾಡಬೇಕೂಂದರೆ ಅವರ ಕೈಲಿ ಇದು ಆಗುವುದಿಲ್ಲ. ಯಾರ್ಯಾರ ಕೈಗೋ ಕೆಲಸ ಕೊಟ್ಟು ಅದೂ ಕಳಪೆಯಾಗುತ್ತಿದೆ, ಅದಕ್ಕಾಗಿ ದರ ಬಗ್ಗೆಯೂ ಸರ್ಕಾರ ಚಿಂತನೆ ಮಾಡಬೇಕಾದ ಅವಶ್ಯಕತೆ ಇದೆಯೆಂದು ಹೇಳಿ ಕೊನೆಯದಾಗಿ ವಿಶೇಷ ಘಟಕ ಯೋಜನೆ. ಸರ್ಕಾರ ಪ್ಲಾನನಲ್ಲಿ ಹಣ ಖರ್ಚು ಮಾಡಬೇಕೆಂದು ನಮ್ಮ ಮುಂದಿಟ್ಟಿದೆ, ಇದಕ್ಕೆ ಏಕೆ ಇಷ್ಟು ತೊಂದರೆ? ಪಿಡಬ್ಲ್ಯೂಡಿಯ ಉದಾಸಿಯವರ ಇಲಾಖೆಗೆ ಬಜೆಟ್ ಪಂಚಿಕೆ 26 ಕೋಟಿ ಇದ್ದರೆ, 36 ಕೋಟಿ ನೇರವಾಗಿ ಸಹಾಯವಾಗುವಂಥದ್ದು ಅಲ್ಲಿ ಸಹಾಯ ಮಾಡಿ ಕಾರ್ಯಕ್ರಮ ಹಾಕಿಕೊಳ್ಳಿ ಎಂದರೆ ಯಾರೂ ಇದರ ಕಡೆ ಗಮನ ಕೊಡುವುದಿಲ್ಲ. ಜಿಲ್ಲಾಸಚಿವರು ಕೂಡ ಇದನ್ನು ರಿವ್ಯೂ ಮಾಡುವುದಿಲ್ಲ. ಜಡಪಿ ವರ್ಕ, ಯಾವುದಾದರೂ ಅಭಿವೃದ್ಧಿ ಕೆಲಸಗಳನ್ನು ರಿವ್ಯೂ ಮಾಡುತ್ತಾರೆಯೇ ಹೊರತಾಗಿ, ವಿಶೇಷ ಘಟಕ ಯೋಜನೆಗೆ ಬಂದ ಹಣವೆಷ್ಟು? ಫಲಾನುಭವಿಗೆ ಎಷ್ಟು ಅನುಕೂಲವಾಯಿತು ಎಂಬ ಬಗ್ಗೆ ಯಾರೂ ಚಿಂತೆನೂ ಮಾಡುವುದಿಲ್ಲ. ಇದೇರೀತಿಯಾಗಿ ಪ್ರತಿವರ್ಷ ಕೋಟ್ಯಾಂತರ ರೂ ಲ್ಯಾಪ್ಸ್ ಸಿಗುತ್ತದೆ, ಮೊನ್ನೆ ಒಂದು ಪ್ರಶ್ನೆಗೆ ಉತ್ತರ ಖರ್ಚಾಗದೆ ಇವತ್ತು ಉಳಿದಿದೆ ಎಂದು ಹೇಳಿದ್ದಾರ. ಇನ್ನೆರಡು ತಿಂಗಳಲ್ಲಿ ಹೇಗೆ ಮಾಡುತ್ತಾರೋ ಎಂಬುದು ದೇವರಿಗೇ ಗೊತ್ತು. ಈ ವಿಶೇಷ ಘಟಕ ಯೋಜನೆ ಹಣವನ್ನೂ ಇವತ್ತು ರಿ-ಅಲೊಕೇಟ್ ಮಾಡಿಕೊಂಡರೂ ಒಂದು ಒಳ್ಳೆಯ ಉದ್ದೇಶಕ್ಕೆ ಖರ್ಚು ಮಾಡುವ ಸಾಧ್ಯತೆ ಇಲ್ಲವೆಂಬುದನ್ನು ಸ್ಪಷ್ಟಪಡಿಸುತ್ತೇನೆ. ಇವತ್ತು ಸಪ್ಲಿಂಟರಿ ಎಸ್ಟಿಮೇಟ್ಸ್ ತಂದಿದ್ದಾರೆ, ಅದನ್ನು ತಮಗೆ ಬೇಕಾದ ಕಾರ್ಯಕ್ರಮಕ್ಕೆ, ಅನೇಕ ಬಜೆಟರಿ ಪ್ರಾವಿಶನ್‌ನಲ್ಲಿ ಕೊಡಬೇಕಾಗಿದ್ದಕ್ಕೆ ಕಡಿಮೆ ಬಿತ್ತು ಎಂದು ತಂದಿದ್ದೀರಿ. ಉದಾಹರಣೆಗೆ ಹೇಳಬೇಕಾದರೆ ಎಚಕೆಡಿಬಿಯಲ್ಲಿ ಹೋದವರ್ಷದ ಅಲಾಟಮೆಂಟ್ ನೋಡಿರಿ; ಅದರ ಹಿಂದಿನ ವರ್ಷದ್ದು ನೋಡಿ, ಈ ವರ್ಷ ಇನ್ನೂ ಕಡಿಮೆಯಾಗಿದೆ. ಅಂದರೆ ಯಾವ ರೀಜನಲ್ ಇಂಬ್ಯಾಲನ್ಸನ್ನು ಸರಿಪಡಿಸಬೇಕೆಂದು ಏನು ಮಲೆನಾಡು

ಬೋರ್ಡಾಗಲಿ ಎಚ್‌ಕೆಡಿಬಿ ಆಗಲಿ ಬಯಲುಸೀಮೆ ಬೋರ್ಡಾಗಲಿ ಆಗಿವೆ ಇದಕ್ಕೆ ಹಣ ನೀವು ಕಡಿಮೆ ಮಾಡಿ, ಇಂತಹ ಸಪ್ಲಿಮೆಂಟರಿ ಎಸ್ಟಿಮೇಟ್ಸಿನಲ್ಲಿ ನಿಮಗೆ ಬೇಕಾಗಿರುವುದಕ್ಕೆ ಹೆಚ್ಚಿಗೆ ಹಣ ಕೊಟ್ಟುಕೊಂಡು ನಿಮ್ಮ ಕೆಲಸ ಮಾಡಿಕೊಳ್ಳುತ್ತಿದ್ದೀರಿ. ಇದು ಡಿಸ್ಟ್ರಿಷನರಿ ಗ್ರಾಂಟ್‌ನಲ್ಲೂ ಆಗಿದೆ ಮುನಿಸಿಪಾಲಿಟಿ ಗ್ರಾಂಟ್, ತೆಗೆದು ನೋಡಿದಿರಿ, ಎರಡು ಜಿಲ್ಲೆಗೆ ಮಾತ್ರ ಒಂದೂವರೆ ಕೋಟಿಯನ್ನು ಹಂಚಿದ್ದಾರೆ ಏಕೆ ಬಾಕಿ ಜಿಲ್ಲೆಗಳಿಗೆ ಕೊಡುವುದಿಲ್ಲವೆ? ಅಲ್ಲಿ ಜನ ಇರುವುದಿಲ್ಲವೇ? ಮೈಸೂರು ಬೀದರ್, ಕೂರ್ಗ್ ಬಿಟ್ಟರೆ, ಬೇರೆ ಯಾವ ಟೌನ್ ಮುನಿಸಿಪಾಲಿಟಿಗೂ ಹಣ ಇಲ್ಲ. ಏಕಿಲ್ಲ?

ಶ್ರೀ ಸಿದ್ದರಾಮಯ್ಯ : ದಸರಾ ನಡೆಯುವಾಗ ಎಲ್ಲರ ಕಾಲದಲ್ಲೂ ವಿಶೇಷ ಅನುದಾನ ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಜಿ.ಓ ಹೇಳುತ್ತಿರುವುದು ಒಂದು ತಿಂಗಳ ಹಿಂದಿನದು. ಯಾವರೀತಿಯಾಗಿ ಆಶ್ರಯ ಜಿಒನೂ ಡಿಸೆಂಬರ್ 30ಕ್ಕೆ ಬಂತೋ ಅದೇರೀತಿಯಾಗಿ ಈ ಜಿಒನೂ ಬಂದಿದೆ, ನೀವು ನೋಡಿಲ್ಲವೆಂದು ಕಾಣುತ್ತದೆ. 8 ಪಟ್ಟಣಕ್ಕೆ ಮಾತ್ರ ವಿಶೇಷ ಅನುದಾನ ಕೊಟ್ಟಿದ್ದಾರೆ. ಅದಕ್ಕೇ ನಾನು ಹೇಳುವುದೇನೆಂದರೆ ಈ ರೀತಿಯಾಗಿ ಡಿಸ್ಟ್ರಿಷನರಿ ಹಣ ಇನ್‌ಡಿಸ್ಟ್ರಿವಿನೇಟ್ಲಿ ಗ್ರಾಂಟ್ ಮಾಡಿಕೊಂಡು ಹೋದರೆ, ಅಭಿವೃದ್ಧಿ ಹೇಗೆ ಆಗಲು ಸಾಧ್ಯ? ಅದಕ್ಕೇ ಇದರ ಮೇಲೆ ಕಡಿವಾಣದ ಶಿಸ್ತು ಇರಬೇಕು, ಅಂತಹ ಆರ್ಥಿಕ ಶಿಸ್ತು ತರಬೇಕು ಎಂದರೆ ತಾವು ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿ, ಬೇಕಾದರೆ ಇನ್ನೂ ಹೆಚ್ಚಿನ ಹಣ ಕೊಡಿ ಅದು ಬಿಟ್ಟು ಬೇಕಾದಲ್ಲಿ ಹೆಚ್ಚಿಗೆ ಕೊಡುವುದು, ಬೇಡವಾದಲ್ಲಿ ಸಂಪೂರ್ಣ ನೆಗ್ಲೆಟ್ ಮಾಡುವುದು ಸರಿಯಾಗುವುದಿಲ್ಲ. ಅದಕ್ಕಾಗಿ ದಯವಿಟ್ಟು ಇಂತಹ ಸಪ್ಲಿಮೆಂಟರಿ ಎಸ್ಟಿಮೇಟ್ಸಗಳಿಗೆ ನಾವು ಒಪ್ಪುವುದಕ್ಕಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : ಅಧ್ಯಕ್ಷರೆ ರಾಜ್ಯಾಂಗದ ಬಗ್ಗೆ ನಾನು ಮಾತನಾಡಲು ಹೋಗುವುದಿಲ್ಲ. ಈಗಾಗಲೇ ತಾವು ತೀರ್ಪು ಕೊಟ್ಟಿದ್ದೀರಿ. ಪೂರಕ ಅಂದಾಜುಗಳು ಹೊಸ ವಿಚಾರವೇನಲ್ಲ. ಎಲ್ಲಾ ಕಾಲದಲ್ಲಿ ಎಲ್ಲಾ ಸರ್ಕಾರಗಳು ಒಂದು ಕಂತು ಎರಡು ಕಂತು ಪೂರಕ ಅಂದಾಜು ತಂದು ಸದನದ ಒಪ್ಪಿಗೆ ಪಡೆಯುವುದು ಸಾಮಾನ್ಯವಾಗಿ ನಡೆದುಕೊಂಡು ಬಂದಿರುವ ಪದ್ಧತಿ. ಅದಕ್ಕಾಗಿಯೇ ರಾಜ್ಯಾಂಗದಲ್ಲಿ 205ನೇ ವಿಧಿ ಇಟ್ಟಿರುವುದು. ಆ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನ ಮಾಡಲು ಹೋಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಹುಬ್ಬಳ್ಳಿಯ ಮಹದೇಶ್ವರ ಜವಳಿಯಲ್ಲಿ ಏಕೆ ಇದನ್ನು ಮಾಡಿದಿರಿ ಎಂದು. ಇದನ್ನು ಹೊಸದಾಗಿ ನಿನ್ನೆ ಮೊನ್ನೆ ಮಾಡಿಕೊಂಡಿರುವುದಿಲ್ಲ. 1985-86ರಲ್ಲೇ ನಾವು ಎಲ್ಲ ಪ್ರಯತ್ನಗಳನ್ನೂ ಮಾಡಿ ಎನ್‌ಟಿಸಿಯವರಿಗೆ ತೆಗೆದುಕೊಳ್ಳಿ ಎಂದು, ಖಾಸಗಿಯವರ ಜೊತೆ ಎಲ್ಲ ಪ್ರಯತ್ನ ಮಾಡಿ ಎಲ್ಲ ಪ್ರಯತ್ನಗಳು ವಿಫಲವಾದ ಮೇಲೆ ಸರ್ಕಾರವೇ ಇದನ್ನು ತೆಗೆದುಕೊಂಡು ಅದಕ್ಕೆ ಪರಿಹಾರ ಕೊಡಬೇಕಾಗಿತ್ತು. ಅಷ್ಟು ವರ್ಷದಿಂದ ಹಾಗೆ-ಉಳಿದಿದ್ದ ಪರಿಹಾರವನ್ನು ಕೊಡುವುದಕ್ಕಾಗಿ 4.46 ಕೋಟಿಗಳನ್ನು ಕೊಟ್ಟಿದ್ದೇವೆ. ಇದರಲ್ಲಿ ಮುಚ್ಚಿಡಬೇಕಾದ ಪ್ರಯತ್ನಗಳಿಲ್ಲ. ಮತ್ತು ಇದಕ್ಕೆ ಯಾವುದೇ ಸಂಬಂಧಪಟ್ಟ ಆರೋಪಕ್ಕೆ ಹುರುಳಿಲ್ಲ.

7.20 ಪಿ.ಎಂ

ಇನ್ನು ಕಬ್ಬಿನ ಸಾಲದ ವಿಚಾರವಾಗಿ ಹೇಳುವುದಾದರೆ, ಇದು ನಮ್ಮ ಕಾಲದಲ್ಲಿ ಆದದ್ದಲ್ಲ, ಇದು ಹಿಂದಿನಿಂದಲೂ ಉಳಿದುಕೊಂಡು ಬಂದಿದೆ. ವಿಶೇಷವಾಗಿ ಇವರ ಸರ್ಕಾರ ಇದ್ದಾಗಲೇ ಈ ರೈತರ ಕಬ್ಬಿನ ಸಾಲವೆಲ್ಲಾ ಉಳಿದಕೊಂಡಿರುವುದು. ರೈತರಿಗೆ ಕಬ್ಬಿನ ಸಾಲ ಕೊಡಿದಿದ್ದುದರಿಂದ ಆ ಬಗ್ಗೆ ಸಿ.ಓ.ಡಿ. ತನಿಖೆಯಾಗುತ್ತಿದೆ, ಕ್ರಮ ತೆಗೆದುಕೊಳ್ಳುವಂತಾದ್ದು ಬೇರೆ ವಿಚಾರ. ಆದರೆ, ರೈತರು ಏನು ಪಾಪ ಮಾಡಿದ್ದರು? ರೈತರುಗಳು ತಾವು ಬೆಳೆದಂಥ ಕಬ್ಬಿಗೆ ಹಣ ಕೊಡದೇ ಅದು ಹಾಗೇ ಉಳಿದುಕೊಂಡು ಇವ್ಹೊತ್ತು ನಾವು ಆ ಹಣವನ್ನು ಕೊಡತಕ್ಕಂಥ ಪರಿಸ್ಥಿತಿ ಉದ್ಭವಿಸಿದೆ. ಅಲ್ಲಿನ ಸಕ್ಕರೆ ಕಾರ್ಖಾನೆ ನಿಂತುಹೋಗಿ ರೈತರೆಲ್ಲಾ ಕಂಗಾಲಾಗಿದ್ದರು, ದುಡ್ಡು ವಾಪಸ್ಸು ಬರದೇ ಅವರೆಲ್ಲಾ ಬಹಳ ತೊಂದರೆಗೀಡಾಗಿದ್ದರು. ಆದುದರಿಂದ, ನಾವು ಆಳಂದ ಸಕ್ಕರೆ ಕಾರ್ಖಾನೆಗೆ 300 ಲಕ್ಷ ಹಾಗೂ ಬೀದರ್ ಸಕ್ಕರೆ ಕಾರ್ಖಾನೆಗೆ ನಾಲ್ಕು ಕೋಟಿ ರೂಪಾಯಿಗಳನ್ನು ಕೊಟ್ಟು, ರೈತರಿಗೆ ಕೊಟ್ಟಿರತಕ್ಕಂಥಾದ್ದನ್ನು ನಾವು ಬಜೆಟನಲ್ಲಿ ಇಟ್ಟುಕೊಂಡಿಲ್ಲ. ಇದನ್ನು ನಾವು ರೈತರ ಅನುಕೂಲಕ್ಕೋಸ್ಕರ ಮಾಡಿರುವುದು. ಇದನ್ನು ಅವರು ಬಿಟ್ಟುಹೋಗಿದ್ದರು. ಆದುದರಿಂದ, ಇದರಲ್ಲಿ ವಿರೋಧ ಮಾಡಬೇಕಾದಂಥ ಅಗತ್ಯವೇನೂ ಕಂಡುಬರುವುದಿಲ್ಲವೆಂದು ನನಗನ್ನಿಸುತ್ತದೆ. ಇನ್ನು ರಾಷ್ಟ್ರೀಯ ಕ್ರೀಡೆ ಬಗ್ಗೆ ಈಗಾಗಲೇ ನನ್ನ ಸಹೋದ್ಯೋಗಿಗಳು ಹೇಳಿದ್ದಾರೆ. ಈ ದಿಸೆಯಲ್ಲಿ ಕೇಂದ್ರ ಸರ್ಕಾರ ನಮಗೆ ಎಂಟು ಕೋಟಿ ರೂಪಾಯಿಗಳನ್ನು ಕೊಟ್ಟದ್ದು ಅದನ್ನು ನಾವು ಕ್ರೀಡಾ ಪ್ರಾಧಿಕಾರಕ್ಕೆ ಕೊಟ್ಟಿದ್ದೇವೆ. ಬರುವ ಮೇ ತಿಂಗಳ 18ನೇ ತಾರೀಖಿನಂದು ರಾಷ್ಟ್ರಪತಿಗಳನ್ನು ಆಹ್ವಾನಿಸಿ ಅವರಿಂದ ಕಾರ್ಯಕ್ರಮವನ್ನು ಉದ್ಘಾಟಿಸುವುದಕ್ಕೆ ಈಗಾಗಲೇ ನಿಗದಿ ಪಡಿಸಿದ್ದಾರೆ. ಈಗಾಗಲೇ ಇದಕ್ಕೆ ನಿಗದಿಪಡಿಸಿದ್ದಂಥ ಹಣ ಸಾಕಾಗುತ್ತಿರಲಿಲ್ಲವಾದ್ದರಿಂದ ಹೆಚ್ಚಿಗೆ ಹಣ ಕೊಟ್ಟಿದ್ದು, ಇದಕ್ಕೆ ಸದನದ ಒಪ್ಪಿಗೆ ಪಡೆಯಲು ತಂದಿದ್ದೇವೆ. ಅಲ್ಲಿ ಏನೋ ಅನಾಹುತವಾಗಿದೆ, ರಿ-ಎಸ್ಟಿಮೇಟ್‌ನಲ್ಲಿ ಬಹಳ ಜಾಸ್ತಿಯಾಗಿದೆಯೆಂದು ತಿಳಿಸಿರುವುದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದೇವೆ. ಅಲ್ಲಿ ಕೆಲವು ಹೊಸ ಕೆಲಸಗಳನ್ನು ಮಾಡಿದ್ದರಿಂದ ಎಸ್ಟಿಮೇಟ್‌ನಲ್ಲಿ ಹೆಚ್ಚಾಗಬೇಕಾದಂಥ ಅನಿವಾರ್ಯತೆ ಬಂದ ಕಾರಣಕ್ಕಾಗಿ ನಾವು ಹೆಚ್ಚು ಕೊಡಬೇಕಾಗಿದೆಯೇ ಹೊರತು, ಬೇರಾವುದೇ ಕಾರಣಕ್ಕಾಗಿ ಅಲ್ಲ. ಆದುದರಿಂದ, ವಿರೋಧ ಪಕ್ಷದ ನಾಯಕರು ಮಾಡಿರುವ ಆರೋಪದಲ್ಲಿ ಏನೇನೂ ಹುರುಳಿಲ್ಲ. ಅದಕ್ಕೋಸ್ಕರ, ಯಾವುದೇ ತನಿಖೆ ಮಾಡಬೇಕಾದಂಥ ಅಗತ್ಯ ಉದ್ಭವಿಸುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹುರುಳಿಲ್ಲವೆಂದು ಹೇಳುತ್ತೀರಲ್ಲಾ, ಹಾಗಾದರೆ, ಇದನ್ನು ರೆಫರ್ ಮಾಡಿ.

ಶ್ರೀ ಸಿದ್ದರಾಮಯ್ಯ : ಹುರುಳಿಲ್ಲದ್ದು, ಆರೋಪಗಳಿಗೆಲ್ಲಾ ತನಿಖೆ ಮಾಡುವುದಕ್ಕಾಗುವುದಿಲ್ಲ. ಹಾಗಿದ್ದರೆ, ತಾವು ಸಾಕ್ಷ್ಯಾಧಾರಗಳನ್ನು ತೆಗೆದುಕೊಂಡು ಬನ್ನಿ, ಮಾಡೋಣ. ಸುಮ್ಮನೆ ಇದ್ದಕ್ಕಿದ್ದಂತೆ ಅಲ್ಲಿ ಹಣ ದುರುಪಯೋಗವಾಗಿದೆ ಎನ್ನುವುದಕ್ಕೆಲ್ಲಾ, ಇಂತಹ ಆರೋಪಗಳಲ್ಲಿ ಹುರುಳಿಲ್ಲ, ವಿಚಾರಣೆ ಮಾಡಬೇಕಾದಂಥ ಅಗತ್ಯವಿಲ್ಲ, ಅನೇಕ ಬಾರಿ ಇದರ ಬಗ್ಗೆ ಈ ಮನೆ ಹಾಗೂ ಈ ಮನೆಯಲ್ಲಿ ಚರ್ಚೆಯಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಂತಹ ಉತ್ತರ ಕೇಳುವುದಕ್ಕೆ ನಾವು ತಯಾರಿಲ್ಲ, ಇದನ್ನು ಪ್ರತಿಭಟಿಸಿ ನಾನು ಹೊರಗಡೆ ಹೋಗುತ್ತೇನೆ.

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ ಯವರು ನೇತೃತ್ವದಲ್ಲಿ ಕಾಂಗ್ರೆಸ್ ಸದಸ್ಯರು ಸದನದಿಂದ ಸಭಾತ್ಯಾಗ ಮಾಡಿದರು.)

ಶ್ರೀ ಸಿದ್ಧರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಅವರು ಹೋಗಲಿ, ಇಂತಹ ಪ್ರಚಾರಕ್ಕೋಸ್ಕರ ಹೋಗಬೇಕು ಎನ್ನುವುದಾದರೆ ಹೋಗಲಿ. ವಿರೋಧ ಪಕ್ಷದ ನಾಯಕರಿಂದ ನಾನು ಈ ರೀತಿ ನಿರೀಕ್ಷಿಸಿರಲಿಲ್ಲ. ಕುಳಿತುಕೊಳ್ಳಿ, ಏಕೆ ಹೋಗುತ್ತಿದ್ದೀರಿ ? ನಿಮ್ಮ ಸರ್ಕಾರವಿದ್ದಾಗ ಇಂತಹ ಆರೋಪಗಳಿಗೆ ಈ ರೀತಿ ಮೂರು ಸಾರಿ ಮಾಡಬೇಕಾಗಿತ್ತು, ಸಾವಿರ ಸಾರಿ ಮಾಡಬೇಕಾಗಿತ್ತು, ಎಲ್ಲರೂ ದಪ್ಪ ಚರ್ಮದ ತರಹ ಕುಳಿತಿದ್ದಿರಿ. ಈಗ ನೀವು ನಮಗೆ ಕೇಳುವುದಕ್ಕೆ ಬಂದಿದ್ದೀರಿ. ನೀವು ಬಿಟ್ಟುಹೋಗಿರತಕ್ಕ ಪಾಪದ ಕೊಳೆಯನ್ನು ನಾವು ತೆಗೆಯುತ್ತಿದ್ದೇವೆ, ನಾವು ಇವರ ಸಾಲ ತೀರಿಸುತ್ತಿದ್ದೇರೆ. ಹಾಲು ಕೊಡುತ್ತೇವೆಂದು ಮುಖದ ಮೇಲೆ ಹಾಲು ಚೆಲ್ಲಿ, ದುಡ್ಡು ಕೊಡುವುದಕ್ಕಾಗದೆ ಸುಮಾರು 55 ಲಕ್ಷರೂಪಾಯಿಗಳನ್ನು ತೀರಿಸದೆ ಬಿಟ್ಟು ಹೋಗಿದ್ದರು, ನಾವು ಈಗ ಅದನ್ನು ತೀರಿಸುತ್ತಿದ್ದೇವೆ. ಸಂಬಳ ಕೊಡುವುದಕ್ಕೆ ದುಡ್ಡಿಲ್ಲವೆಂದು ಸಾಲ ತೆಗೆದುಕೊಂಡು ಬಂದಿದ್ದ ಎಲ್ಲವನ್ನೂ ತೀರಿಸಿದ್ದೇವೆ. ಇವರು ನಮಗೆ ಬುದ್ಧಿ ಹೇಳಲು ಬರುತ್ತಿದ್ದಾರೆ, ಇವರು ನಮ್ಮಿಂದ ಪಾಠ ಹೇಳಿಸಿಕೊಳ್ಳಬೇಕು. ತಾವು ಪ್ರಚಾರಕ್ಕೋಸ್ಕರ ಮಾಡುತ್ತಿರುವ ಇಂತಹ ಯಾವುದೇ ಆರೋಪದಲ್ಲಿ ಹುರುಳಿಲ್ಲ. ಹಾಲಿಗೆ ಕೊಟ್ಟಿರುವುದು ಸಹ ಅವರೇ ಮಾಡಿರುವುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ವಿಶೇಷ ಘಟಕ ಯೋಜನೆಯಡಿ ಮಲೆನಾಡು ಹೈದರಾಬಾದ್ ಅಭಿವೃದ್ಧಿ ಮಂಡಳಿ ಮತ್ತು ಬಯಲು ಸೀಮೆ ಅಭಿವೃದ್ಧಿಗಾಗಿ ಈ ವರ್ಷ ಅಂದರೆ 96-97ನೇ ಸಾಲಿಗಾಗಿ ಇಟ್ಟಿಂಥ ಹಣವನ್ನು ಈ ಸಲ ಕೊಡಬೇಕು. ಅಲ್ಲದೆ, ಮುಂದಿನ ಸಲದಿಂದ ನಮ್ಮ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆಯೇ ಅದಕ್ಕೆ ನಾವು ಒಪ್ಪಿಕೊಂಡಿದ್ದೇವಾದ್ದರಿಂದ 96-97ನೇ ಸಾಲಿಗೆ ವಿಶೇಷ ಘಟಕ ಯೋಜನೆಯ ಟ್ರೈಬಲ್ ಪ್ಲಾನನಲ್ಲಿ ಈ ಹಣವನ್ನು ಒದಗಿಸಿಕೊಡಬೇಕು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ, ಅದು ಬೇರೆ ವಿಚಾರವಾದ್ದರಿಂದ ಅನಂತರ ಚರ್ಚೆ ಮಾಡೋಣ. ಆದುದರಿಂದ, ಇಲ್ಲಿ ತಂದಿರತಕ್ಕ ಪೂರಕ ಅಂದಾಜುಗಳಿಗೆ ನಾವು ಬಳಸಿರತಕ್ಕ ಸಾದಿಲ್ವಾರು ಹಣವನ್ನು ಸದುದ್ದೇಶಗಳಿಗೆ ಖರ್ಚು ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ : ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಸಮಗ್ರವಾದ ಚರ್ಚೆಗೆ ತಾವು ಅವಕಾಶ ಮಾಡಿಕೊಡುವುದಿಲ್ಲವೇ ? ಯಾರೋ ಒಬ್ಬರು ಇದರ ಬಗ್ಗೆ ಭಾಷಣ ಮಾಡಿದರೆ ಆಯಿತೆಂದು ಹೇಳುತೀರೋ ?

ಉಪಾಧ್ಯಕ್ಷರು : ತಾವು ಈಗಲೇ ಮಾತನಾಡಿ, ಏಕೆಂದರೆ ಸಮಯ ನಿಗದಿಯಾಗಿದೆ.

ಶ್ರೀ ವಾಟಾಳ್ ನಾಗರಾಜ: ಈಗಲೇ ಮಾತಾನಾಡಿ ಎಂದರ ಹೇಗೆ? ಈಗ ಏಳೂವರೆ ಗಂಟೆಯಾಗಿದೆ. ತಮಗೆ ಅನುಕೂಲ ಬಂದಂತೆ ಈಗಲೇ ಮಾತನಾಡಿ ಎನ್ನುವುದು, ಅನುಕೂಲ ಇಲ್ಲದಿದ್ದರೆ ಸಭೆಯನ್ನು ಮುಂದಕ್ಕೆ ಹಾಕುವುದು, ಈ ರೀತಿಯಾಗುವುದು ಬೇಡ. ಆದುದರಿಂದ, ತಮ್ಮಲ್ಲಿ ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ಇನ್ನು ಸಾಕಷ್ಟು ಸದಸ್ಯರು ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಮಾತನಾಡುವವರಿದ್ದಾರೆ. ಇದನ್ನು ಇವೊತ್ತೇ ಮುಗಿಸಬೇಕಾಗಿರುವುದರಿಂದ ತಾವು ಮಾತನಾಡವುದಾದರೆ ನನ್ನ ಆಕ್ಷೇಪವೇನೂ ಇಲ್ಲ.

ಈಗ 1996-97ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು) ಮೇಲಿನ ಚರ್ಚೆ ಮುಕ್ತಾಯವಾಯಿತು. ಪ್ರಸ್ತಾವನ್ನು ನಾನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗೆದೆ.

" ದಿನಾಂಕ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1, 2, 8, 9, 11, 12, 13, 14, 15, 17, 19, 23, 25, 30, 31, 32, 35, 36, 39, 40, 45, 48, 49, 52, 57 ಮತ್ತು 58ಕ್ಕೆ ಸಂಬಂಧಿಸಿದಂತೆ ಇವುಗಳಿಗೆ ಸಂದಾಯ ಮಾಡುವಲ್ಲಿ ಬಂಡವಾಳ ಖಾತೆಯಲ್ಲಿ ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರೂ ಮಾಡಿದ ಮೊಬಲಗಿಗೆ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಪ್ರಸ್ತಾವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 1 - ವ್ಯವಸಾಯ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವ್ಯವಸ್ಥಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 231,50,27,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 731, 85,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ 2 - ತೋಟಗಾರಿಕೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ತೋಟಗಾರಿಕೆ'ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 68,00,30,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ

ಖಾತೆಯಲ್ಲಿ 130,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 8 - ರೇಷ್ಮೆ ವ್ಯವಸಾಯ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ರೇಷ್ಮೆ ವ್ಯವಸಾಯ'ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 125,57,86,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 871,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 9 - ಸಕ್ಕರೆ ಮತ್ತು ಜವಳಿ ಉದ್ಯಮಗಳು ಇತ್ಯಾದಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಕ್ಕರೆ ಮತ್ತು ಜವಳಿ ಉದ್ಯಮಗಳು ಇತ್ಯಾದಿ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 30,45,25,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9,61,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 11 - ಉನ್ನತ ಶಿಕ್ಷಣ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಉನ್ನತ ಶಿಕ್ಷಣ'ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 302,96,35,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 12 - ಯುವಜನ ಸೇವೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಯುವಜನ ಸೇವೆ' ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 35,15,07,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 13 - ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ'ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು

ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 16,39,08,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 14 - ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣಕ್ಕೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 16,21,28,07,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 15 - ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆ' ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 90,51,21,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನ ಕ್ರಮಾಂಕ 17 - ಸರಕಾರಿ ನೌಕರಿಗೆ ಸಹಾಯ ಮತ್ತು ವಿವಿಧ ಸಾಲಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸರ್ಕಾರಿ ನೌಕರರಿಗೆ ಮತ್ತು ವಿವಿಧ ಸಾಲ' ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 13,45,00,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 15,86,60,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 19 - ಇತರೆ ವಿವಿಧ ಸೇವೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಇತರೆ ವಿವಿಧ ಸೇವೆ' ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 46,25,00,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,85,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 23 - ಸಾರಿಗೆ ಸೇವೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಾರಿಗೆ ಸೇವೆ 'ಗಳಿಗೆ ಸಂದಾಯಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 66, 74,07,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 15,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 25 - ಬಂಧೀಖಾನೆಗಳು, ಗೃಹರಕ್ಷಕ ದಳ, ನಾಗರಿಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ಇತ್ಯಾದಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಬಂಧೀಖಾನೆಗಳು, ಅಗ್ನಿಶಾಮಕ ಮತ್ತು ಸೈನಿಕ ಕಲ್ಯಾಣ ಇತ್ಯಾದಿ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 41, 88,99,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 55,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 30 - ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಗೃಹ ನಿರ್ಮಾಣ(ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)' ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 100,91,83,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 991,58,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 31 - ನಗರಾಭಿವೃದ್ಧಿಯ (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲಕ ಸೌಕರ್ಯ ವ್ಯವಸ್ಥೆ ಅಭಿವೃದ್ಧಿ ನಿಗಮವನ್ನು ಹೊರತುಪಡಿಸಿ)

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ' ನಗರಾಭಿವೃದ್ಧಿ' (ಬೆಂಗಳೂರು ಅಭಿವೃದ್ಧಿಯೋಜನೆಗಳು ಮತ್ತು ನಗರ ಮೂಲ ಸೌಕರ್ಯ ವ್ಯವಸ್ಥೆ ಅಭಿವೃದ್ಧಿ ನಿಗಮವನ್ನು ಹೊರತು ಪಡಿಸಿ) ಸಂದಾಯ ಮಾಡುವಲ್ಲಿ ಬರತತಕ್ಕ ಅಭಿವೃದ್ಧಿವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 247, 73,80,000 ರೂಪಾಯಿಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 124,78,75,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 32 - ಬೆಂಗಳೂರು ಅಭಿವೃದ್ಧಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಬೆಂಗಳೂರು ಅಭಿವೃದ್ಧಿ'ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 194,41,87,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 40,10,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 35 - ರಾಜ್ಯವಿಧಾನಮಂಡಲ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ರಾಜ್ಯ ವಿಧಾನಮಂಡಲ'ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 15, 59,28,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 36 - ನ್ಯಾಯ ಪರಿಪಾಲನೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ನ್ಯಾಯ ಪರಿಪಾಲನೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 71,43,79,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 39 - ಜಿಲ್ಲಾಡಳಿತ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಜಿಲ್ಲಾಡಳಿತ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 100,29,74,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 40 - ಸಾಮಾನ್ಯ ಆಡಳಿತ ಇತ್ಯಾದಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಾಮಾನ್ಯ ಆಡಳಿತ ಇತ್ಯಾದಿ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 72, 77,22,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 45 - ರಸ್ತೆಗಳು ಮತ್ತು ಸೇತುವೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ರಸ್ತೆಗಳು ಮತ್ತು ಸೇತುವೆ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 170,38,84,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 57,90,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 48 - ಭೂ ಕಂದಾಯ ಇತ್ಯಾದಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಭೂ ಕಂದಾಯ ಇತ್ಯಾದಿ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 86,61,12,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 601,75,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 49 - ಮುದ್ರಾಂಕಗಳು ಮತ್ತು ನೋಂದಣಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಮುದ್ರಾಂಕಗಳು ಮತ್ತು ನೋಂದಣಿ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 13,48,07,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 52 - ಸಹಕಾರ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಹಕಾರ'ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 48,31,81,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 23,16,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 57 - ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗ ಮತ್ತು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗ ಮತ್ತು ಹಿಂದುಳಿದವರ ಕಲ್ಯಾಣ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 296,48,09,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 22,56,00,000

ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ 58 - ಮಹಿಳಾ ಮತ್ತು ಮಕ್ಕಳ ಕಲ್ಯಾಣ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1997ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಮಹಿಳಾ ಮತ್ತು ಮಕ್ಕಳ ಕಲ್ಯಾಣ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 287,25,96,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 100,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಉಪಾಧ್ಯಕ್ಷರು : ಈಗ ಸದನವನ್ನು ಮುಂದೂಡಿ ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವುದು

(ಸದನವು ಸಂಜೆ 7 ಗಂಟೆ 27 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 26ನೇ ಫೆಬ್ರವರಿ ಮಾಹೆ 1997ರ ಬುಧವಾರ ದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).